ಶ್ರೀ ಗೋಪಾಲಕೃಷ್ಣಾಯ ನಮಃ

ಯಕ್ಷಗಾನ

ಶಿವಪಂಚಾಕ್ಷರಿ ಮಹಿಮೆ

[ಶ್ವೇತಕುಮಾರ ಚರಿತ್ರೆ]

ಶಾರ್ದೂಲ ವಿಕ್ರೀಡಿತ ವೃತ್ತ

ಶ್ರೀ ಲಕ್ಷ್ಮೀರಮಣಂ ಸರೋಜನಯನಂ ಶ್ರೀ ವಿಶ್ವನಾಥಂ ಹರಿಂ ॥
ಬಾಲಾರ್ಕಾಮಿತ ಶೋಭಿತೇಜ್ವಲಕರಂ ಭಾಗೀರಥೀ ಸೇವಿತಂ ॥
ಕಾಲಗ್ರೀವ ಸಖಂ ಕಲಾಮಯ ಸುಖಂ ಕಾರುಣ್ಯ ಕಲ್ಪದ್ರುಮಂ ॥
ಲೀಲಾನಾಟಕ ಸೂತ್ರಧಾರಮಮಲಂ ಗೋಪಾಲಕೃಷ್ಣಂ ಭಜೇ ॥ ೧ ॥

ರಾಗ ನಾಟಿ ರೂಪಕತಾಳ

ಭಜಿಸುವೆ ಶ್ರೀ ಗಣನಾಯಕ । ಗಜಮುಖ ಸಿದ್ಧಿ ವಿನಾಯಕ ರಜತ ಗಿರೀಶನ ಬಾಲಕ । ತ್ರಿಜಗದೊಡೆಯ ಬೆನಕಾ ॥ ೧ ॥ ಅಂಬರ ಮಣಿ ಶತರಾಜಿತ | ತುಂಬುರ ನಾರದ ಪೂಜಿತ । ನಂಬಿದ ಭಕ್ತ ಸುಪೋಷಿತ । ಕುಂಬಿಡುವೆನು ಸತತ ॥ ೨ ॥ ಸದಮಲ ಮಂಗಲ ಮೂರುತಿ । ಬುಧಕುಲ ಸನ್ನುತ ಕೀರುತಿ । ಮಧುಪುರ ಸ್ಥಿರ ನಿನಗಾರತಿ ಬೆಳಗುತ ಗೈವೆ ಕೃತೀ ॥ ೩ ॥

ರಾಗ ಸುರುಟಿ ಏಕತಾಳ

ಅನ್ನಪೂರ್ಣೇಶ್ವರಿಯೇ | ರಕ್ಷಿಪು | ದನ್ನಪೂರ್ಣೇಶ್ವರಿಯೇ |

ಪುಣ್ಯ ಶ್ಲೋಕರಿ | ಗುನ್ನತಪದವಿಯ । ಮನ್ನಿಸುತೀವ ಪ್ರ | ಸನ್ನಳೆ ಜಯ ಜಯ ॥ ೧ ॥ ಮಾತೆ ಮಂಗಲದಾತೇ । ಸಜ್ಜನ । ವ್ರಾತವಿನುತೆ ಖ್ಯಾತೇ || ಭೀತಿರಹಿತೆ ಗಿರಿ । ಜಾತೆ ಸುರಾರ್ಚಿತೆ । ಪಾತಕ ಹರೆ ಖ | ದ್ಯೋತ ಪ್ರಕಾಶಿನಿ ॥ ೨ ॥ ಪಾಡುವೆ ನಾನಿರತಾ | ಯೆರೆಯ । ಪ್ಪಾಡಿ ಯೊಳ್ನೀನಿರುಶಾ | ಪಾಡಿ ನುತಿಸಿ ಕೊಂ ಡಾಡುವ ಭಕ್ತರು । ಬೇಡುವ ಭೀಷ್ಟವ । ನೀಡುವ ದೇವಿಯೆ ॥ ೩ ॥

ರಾಗ ಶಂಕರಾಭರಣ ತ್ರಿವುಡೆತಾಳ

ಶರಣುಜಯ ಶ್ರೀ ವಿಶ್ವನಾಥನೆ । ಶರಣು ಮಂಗಲದಾತನೇ । ಶರಣು ಸುಜನ ಕುಲೈಕ ಪೋಷನೆ | ಶರಣು ತ್ರೈಜಗದೀಶನೇ । ಶರಣು ಶರಣು ॥ ೧ ॥ ಆದಿ ಬ್ರಹ್ಮಾನಂದ ಮೂರುತಿ । ವೇದವಂದಿತ ಸದ್ಗತೀ । ಪಾಪ ಕಮಲವ ನಂಬಿದವರಿಗೆ । ಹಾದಿ ನೀನೇ ತೋರುತೀ || ಶರಣು ಶರಣು || ೨ || ದೋಷಹರ ವರ ಕೇಶವಾರ್ಚಿತ | ವಾಸುಕೀ ಸದ್ಭೂಷಿತ । ಪೋಷಿ ಸೆನ್ನನು ಸತತ ಕಾಶೀ । ವಾಸ ನೀ ದಯಮಾಡುತಾ ॥ ಶರಣು ಶರಣು ॥ ೩ ॥

ಭಾಮಿನಿ

ಲೋಕಗುರು ಕೇಶವನಿಗೆರಗಿ ಪಿ । ನಾಕಿಯ ಬುಜ ಭವಾದಿ ಪುಣ್ಯ । ಶ್ಲೋಕರನು ಕೊಂಡಾಡಿ ಲಕ್ಷ್ಮೀ ದೇವಿಯನು ಸ್ಮರಿಸೀ ॥ ಪಾಕಶಾಸನ ಮುಖ್ಯ ಸಕಲ ದಿ | ವೌಕಸರ ಪ್ರಾರ್ಥಿಸುತ ಕವಿ ವಾಲ್ಮೀಕಿ ವ್ಯಾಸರ ನೆನೆದು ಪೇಳುವೆನೀಕಥಾಮೃತವಾ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಶ್ರೀಮದುತ್ತಮ ಶಿವ ಪುರಾಣವ | ನಾಮಹಾ ಶೌನಕರಿ ಗೊಲವಿಂ | ನೈಮಿಶಾರಣ್ಯದಲಿ ಸೂತನು । ಪ್ರೇಮದಿಂದಾ ॥ ೧ ॥ ಉಸುರುತಿರೆ ಪಂಚಾಕ್ಷರಿಯ ಜಪ । ದೊಸಗೆಯಿಂದಲಿ ಶ್ವೇತಕುವರನು । ಪೊಸತೆನಿಸಿ ಜೀವಿಸಿದನೆಂತೆನೆ | ಋಷಿಗಳೆಲ್ಲಾ ॥ ೨ ॥ ಸುಗುಣ ನಿಧಿಗಳ ಪ್ರಶ್ನೆಯನು ಕೇ । ಳ್ದಗಣಿತಾನಂದದಲಿ ಸೂತನು । ನಗುತ ವಿಶ್ವೇಶ್ವರಗೆ ತಾ ಕೈ । ಮುಗಿಯುತೆಂದಾ ॥ ೩ ॥

ಋಶಿವರರು ಲಾಲಿಪುದು ಹಿಂದಕೆ । ವಸುಮತಿಗೆ ಸೀಮಂತ ಮಣಿಯೋ । ಲೆಸೆವ ರುದ್ರಪುರಾಖ್ಯನಗರವನಧಿಕ ವೈಭವದೀ ॥ ಕುಶಲ ಮತಿವರ ರತ್ನಶೇಖರ । ನೊಸಗೆಯಿಂದಾಳುತ್ತಲಿರುತಿರ । ಲಸಮಬಲ ನೋಲಗವನಿತ್ತನು ಸಭೆಯೊಳೊಂದಿವಸಾ ॥ ೧ ॥

ರಾಗ ಭೈರವಿ ಝಂಪೆತಾಳ

ಸುರಪನಾಸ್ಥಾನದೈ । ಸಿರಿಗೆಂಟುಮಡಿ ಮಿಗಿಲು । ಮೆರೆಯೆ ಸಭೆ ಸಚಿವಗಿಂ । ತೊರೆದನಾನೃಪನೂ ॥ ೧ ॥ ಮಂತ್ರೀಶ ಕೇಳು ಬಿರಿ । ಧ್ರಾಂತ ನಮ್ಮಾಳ್ವಿಕೆಯು । ಕಂತು ಹರನೊಲುಮೆಯಲಿ । ಕಾಂತಿ ಪೆರ್ಚಿದುದು ॥ ೨ ॥ ಅಷ್ಟ ಸೌಭಾಗ್ಯದೊಳು । ದಿಟ್ಟತನ ಶೌರ್ಯದೊಳು ಸೃಷ್ಟಿಯಲಿ ನಮ್ಮ ಸರಿ । ಗಟ್ಟುವವರಿಹರೇ ॥ ೩ ॥ ವೀರ ಸುಕುಮಾರಗಂ । ಧೀರ ಶ್ವೇತ ಕುಮಾರ । ನೀರಸೆಗೆ ಜಿತಮಾರ । ಸಾರ ಗುಣಹಾರ ॥ ೪ ॥ ಸಚಿವಮಣಿ ಬಿಂಬ ನೀ । ಪ್ರಚುರ ಪ್ರಭು ಭಕ್ತಿಯಲಿ । ಶುಚಿಗಳೆಲ್ಲರು ಪ್ರಜೆಗ । ಳಚಲನಿಷ್ಠೆಯಲೀ ॥ ೫ ॥ ಧನ್ಯನಾದೆನು ಮುಂದ । ಕಿನ್ನೆಂತೊ ಹರ ಬಲ್ಲ ನೆನ್ನುತಿರೆ ವನಪಾಲ । ಬಣ್ಣಿಸಿದ ಬಂದು ॥ ೬ ॥

ರಾಗ ಮುಖಾರಿ ಏಕತಾಳ

ರಾಜಾಧಿರಾಜ ಪರಾಕೂ । ಲಾಲಿಸಬೇಕು । ರಾಜಾಧಿರಾಜ ಪರಾಕೂ । ರಾಜಿಪ ವನಸಿರಿ । ರಾಜಿಯನುಳಿಸಿರಿ । ಮಾಜಿಪ ಮೃಗಗಳ । ಗೋಜಿಯ ನಳಿಸಿರಿ ॥ ಪ. ॥ ॥ ಅ. ಪ ॥ ಸೊಕ್ಕಿದ ಕರಿಹರಿ । ಯಿಕ್ಕಲಗಳು ಹರಿ । ದಿಕ್ಕುವವೇನೆಂ । ದೊಕ್ಕಣಿಸಲಿ ಪ್ರಭೋ ॥ ರಾಜಾ ॥ ೧ ॥ ದಟ್ಟಣಿ ಸಮಗಳ ಮೆಟ್ಟುವ ಕ್ರಮಗಳ । ದಿಟ್ಟಸಲಾರ್ಗಳ । ದಿಟ್ಟ ಪ್ರಬಲ ಬಲ ॥ ೨ ॥ ಹಾರುವ ಮೃಗ ಸರಿ । ವಾರವ ತರಿಯೆ ಸ । ವಾರಿ ಚಿತ್ತೈಪುದು । ಬೇರೇನೆನ್ನಲಿ ॥ ೩ ॥

ಭಾಮಿನಿ

ಸಾಕು ಬಿಡು ಭಯ ಬೇಡ ಮೃಗಗಳ । ಝೋಕ ನೋಡುವೆ

ನೊಮ್ಮೆ ಬೇಟೆಯ | ಠೀಕೆಗೇಳದೆ ಸಂತು ಕೆಲದಿನವಡರಿತೇ ಮದವೂ ॥
ಯಾಕೆ ತಡ ಸಚಿವೇಂದ್ರ ಪೊರಡುವ । ದಾಕಡೆಗೆ ನಾವೆನುತ ನೃಪಕುಲ ।
ಶೇಕರನು ಬಲಸಹಿತ ಪೊರಟನು ಬೇಟೆಗುತ್ಸವದೀ ॥ ೧ ॥

ರಾಗ ಸಾರಂಗ ಏಕತಾಳ

ಬೇಟೆಯಾಡುತ್ತ ಬಂದ ಭೂಪಾ । ಬಾಹು ಪ್ರತಾಪಾ । ಬೇಟೆ ಯಾಡುತ್ತ ಬಂದ ಭೂಪಾ ॥ ಪಲ್ಲ ॥ ಈಟಿ ಕಠಾರಿ ಬಿ | ಲ್ಲಾಟಿದ ಪ್ರೌಹುಡರು | ಸೂಚಿಯೊಳಗೆ ಮೃಗ | ಕೂಟವ ತರಿಯುತ ॥ ೧ ॥ ಮತ್ತಗಜಂಗಳ । ವೊತ್ತವ ಸವರುತ | ಕತ್ತರಿಸುತ ತಲೆ । ಯೆತ್ತುವ ಹರಿಗಳ || ೨ || ಅದೊದುರ್ಮದ ಹುಲಿ । ಯೊದಗಿತಧಿಕ ಬಲಿ । ತುದು ಸದೆಯಿರಿ ಯಿರಿ । ತದೊಳೆನ್ನುತಲಿ ॥ ೩ ॥

ವಾರ್ಧಿಕ್ಯ

ಚಿತ್ತವಿಸಿ ಮುನಿವರರು ವಿಧಿ ವಿಲಾಸವನೆಂತು | ಬಿತ್ತರಿಪೆನೀತೆರದಿ ರತ್ನಶೇಖರನೃಪತಿ । ಯುತ್ಸಹದಿ ಬೇಟೆಯನ್ನಾಡುತಿರಲೊಂದು ಸೂಕರ ವೆದ್ದುದಾರ್ಭಟಿಸುತ ॥ ಪೃಥ್ವೀಶನದ ಕಂಡು ಸಚಿವ ಸಹ ಬೆಂಬೊತ್ತೆ । ಕತ್ತಲೆಗೆ ನೆಲೆವೀಡದೆಂಬೊಂದು ಕಾನನ | ಕೃತ್ತತ್ತ ಕೊಂಡೊಯ್ಯೆ ಭೂವರಂ ಕೋಪದೊಳು ಗುರಿಯಿಟ್ಟು ಶರವೆಸೆಯಲು ॥ ೧ ॥

ಭಾಮಿನಿ

ಆ ಶರದ ಹತಿಯಿಂದ ಸೂಕರ । ಘಾಸಿಗೊಂಡಾಸಮಯಕಲ್ಲಿ ವಿಶೇಷ ಬೇಟೆಯಾನಾಡಿ ದಣುವಾರಿಸಲು ಕುಳಿತಿರ್ಪ ॥ ವಾಸವಾರಣ್ಯೇಶ ಶ್ವೇತ ಪ್ರ । ಕಾಸನೆಂಬ ಕಿರಾತನೆಡೆಗಾ । ವೇಶದಿಂ ಬರಲಂಬನೆಚ್ಚದ ಕೆಡಹಿದನು ಧರೆಗೆ ॥ ೧ ॥

ಕಂದ ಪದ್ಯ

ಬಂದನಿತರೊಳಾನೃಪನುಂ । ನಿಂದೀಕ್ಷಿಸುತಾ ಕರಾಳ ಪಂದಿಯು

ಬಗೆಯಂ । ಮುಂದಿಹ ಶಬರನಿದಾರೆಂ । ಬಂದವನರಿಯದಿರಲೆಂದನಾ ಸಿತಶೋಭಂ ॥ ೧ ॥

ರಾಗ ಕಾಂಭೋಧಿ ಝಂಪೆತಾಳ

ಯಾರಯ್ಯ ಧರಣೀಂದ್ರ । ಸ್ವಾರಿಯೆಲ್ಲಿಗಿದೇನ । ನೀ ರೀತಿಯಿಂದ ಪರಿಕಿಸುವೆ ॥ ಘೋರ ಕಿಟಿಯಿದು ಗರ್ವ । ಮೀರಿ ಬಂದೆನ್ನ ಮೇ । ಲೇರುತಿರಲೆಚ್ಚು ಕೆಡಹಿದೆನು ॥ ೧ ॥ ಧರಣಿಯೊಳು ರುದ್ರಪುರ । ದರಸನಹ ರತ್ನಶೇ । ಖರನೆಂಬರೆನ್ನ ನಾನಿತ್ತ । ವರಗಿದೀ ಸೂಕರವ । ತರಿಯಟ್ಟುತ ಬಂದು । ಶರವೆಸೆಯಲಾಯಿತದಕಿಂತು ॥ ೨ ॥ ಕ್ಷೋಣೀಶನಂತೆ ನೀ । ನೇನೆಂಬುದರರೆ ತರಿ । ದಾನಿದರ ಮಡುಹಿರ್ಪೆನೀಗ ॥ ಹೀನಪುಸಿವಾಣಿಯಿಂ । ಮಾನವನು ಕಳೆಯೆ ಬಹು । ಮಾನವೇ ರತ್ನಶೇಖರನೇ ॥ ೩ ॥ ಮಿಥ್ಯ ವಚನವಿದಲ್ಲ । ಸುತ್ತುತಿದಕಾಗಿ ಬೆಂ । ಬೊತ್ತಿದೆವು ನಾವೀರ್ವರಿಂದು । ಮುತ್ಸದ್ದಿ ಸಚಿವನಿವ । ಸತ್ಯವರಿತಿಹನು ಕಿಟಿ । ಸತ್ತುದೆನ್ನಿಂದಾತ್ಮ ಸಾಕ್ಷಿ ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ

ಭಳಿರೆ ನೃಪನೆ ನಿನ್ನ ಸಚಿವ । ತಿಳಿವ ಸತ್ಯವೆಂಬೆಯೆನ್ನ । ಬಲವ ಕೇಳು ಪೇಳ್ವೆರಾನೆ । ಮುಳಿದು ಕೊಂದುದ ॥ ೧ ॥ ಬೇಡ ಬರಿದೆ ವಾದ ನಮಗೆ । ಬೇಡ ನೀ ವಿಚಾರವರಿದು । ಕ್ರೋಧವನ್ನು ಬಿಡುವುದೊಳ್ಳಿ । ತಾಡಿ ಕೆಡದಿರು ॥ ೨ ॥ ಕೆಡಿಪರ್ಯಾರು ಹೆಮ್ಮೆ ಮಾತ । ನುಡಿಯಬೇಡ ಕಿಟಿಯ ಕೊಡಲು । ಬಿಡಲು ನೀನು ಕೊಟ್ಟುದಲ್ಲ । ನಡಿಯೊ ಸುಮ್ಮನೆ ॥ ೩ ॥ ಹಂದೆ ಶಬರ ಗರ್ವವ್ಯಾಕೆ । ಹಂದಿಯನ್ನು ಕೊಡದಿರಲ್ಕೆ । ಕೊಂದು ಕೆಡಹ ದಿರೆನು ಪ್ರಬಲ । ನೆಂದು ತಿಳಿದುಕೊ ॥ ೪ ॥ ಗೆಲುವ ಕೊಲುವ ಭಟನೆ ನೀನು । ಹುಲು ಕಿರಾತನೆಂದು ತಿಳಿದು । ಗಳಹಬೇಡ ಹರನೆ ಬರಲು । ಛಲದಿ ಸೆಣಸುವೆ ॥ ೫ ॥

ರಾಗ ಮಾರವಿ ಏಕತಾಳ

ಮೃಢನನು ಗೆಲ್ಲುವ । ಪಡಿಗನೆ ಬಿಡು ಬಿಡು । ಬಡಿವಾರವ

ದ್ಯಾಕೆ | ಕಡೆಗಾಲವು ನಿನ । ಗಡಸಿತು ನೋಡೆಂ । ದೊಡನೆಚ್ಚನು ಶರವ ||೧|| ಬಿಟ್ಟ ಶರವ ಕಡಿ । ದೊಟ್ಟಲು ನಿಮಿಶದೊ । ಳಿಟ್ಟನು ಗಿರಿ ಶರವ | ದಿಟ್ಟನು ವಜ್ರದಿ | ಕುಟ್ಟುತಲಾಕ್ಷಣ | ಬಿಟ್ಟವ ಪುಡಿ ಗೈಯ್ಯೆ ||೨|| ಅನಿತರೊಳಾನೃಪ । ನನಿಲಾಸ್ತ್ರವ ಬಿಡೆ | ಫಣೀಶರ ದೊಳು ಗೆಲಲು । ಅನಲ ಕಳಂಬವ । ನನುಗೊಳಿಸಲು ಶರಿ । ದನು ಜಲ ಬಾಣದಲಿ ||೩||

ಭಾಮಿನಿ

ಇಂತು ನಾನಾಸಾಯಕಂಗಳ । ನಾಂತು ಹೊಯ್ದಾಡುತಿರೆ ಶಬರ ಮ | ಹಾಂತ ವಿಕ್ರಮದಿಂದ ಗೆಲಿದೆಲ್ಲವನು ಕೋಪದಲಿ || ಕಂತು ಹರನೆನೆ ಕೆರಳುತಾಗಲ । ನಂತ ಶಕ್ತಿಯ ಬಿಡಲು ನೃಪಗದನೆಂತು ಪೇಳಲಿ ರತ್ನಶೇಖರ ನಳಿದ ವಿಧಿವಶದೀ ||೧||

ಕಂದ ಪದ್ಯ

ಬಿದ್ದಾ ನೃಪತಿಯ ಕಾಣುತ । ಲಿದ್ದಾ ಸಚಿವನು ವಿಶಾದ ಮನ ದಿಂದಾಗಳ್ || ರುದ್ರಪುರೇಶನೆ ಹಾ ಹಾ । ಯುದ್ಧದಿ ಮಡಿದೆಯಾಯೆನು ತಳಲಿದ ಕಳೆಗುಂದಿಂ ||೧||

ರಾಗ ಆನಂದ ಭೈರವಿ ಏಕತಾಳ

ಹಾ ಪ್ರಭೋ ಯಿನ್ನೇನು ಗತಿಯು । ಸುಪ್ರತಾಪ ನಮ್ಮನಗಲಿ । ಪೋದೆಯಾ । ಯಿಂ | ತಾದೆಯಾ ||೧|| ಹುಲು ಕಿರಾತ ನಿನ್ನ ನಿಂತು । ಕೊಲುವ ದೆಂದಡೇನ್ವಿಚಿತ್ರ । ತರವಿದು ಎಂತು । ತೊರೆವುದು ||೨|| ಸಚಿವ ನೊಡನ ದೊಂದು ಪ್ರೇಮ । ವಚನವಾಡ ಲಾರೆಯಾ ನೃ । ಪಾಲನೇ । ಸುಗುಣ | ಶೀಲನೆ ||೩||

ಭಾಮಿನಿ

ಯಾಕೆ ಮರುಗುವೆ ಮಂತ್ರಿ ಬರಿದೆ ವಿ । ವೇಕವಿಲ್ಲವೆ ನಿನಗೆ ಯುದ್ಧ ದೊ | ಳಾಕೆವಾಳರಿಗೊದಗೆ ಮರಣವು ವೀರ ಸ್ವರ್ಗವದೂ || ಸೂಕರದ ನೆವದಿಂದ ಲೆನ್ನೊಳು । ಪೋಕ ತನದಿಂದಳಿದ ನಡೆ ನಡೆ। ಸಾಕು ದುಃಖಿಸ ದೆನಲು ಶಬರನು ಯೋಚಿಸುತ ಸಚಿವ ||೧||

ರಾಗ ಆರ್ಯ ಸವ್ವಾ

ಖಳನಾದರು ನುಡಿ । ಯೊಳು ತಿಳಿವಿನ ಹೊನ । ಲಿಳಿಹುದೆನು ತರಿದಿದ್ದಾಗ । ನಿಳಯಕೆ ಬಂದದ । ತಿಳುಹುತ ಲೆಲ್ಲವ । ಬಲಯುತ ಶ್ವೇತಕುಮಾರನಿಗೆ ॥ ೧ ॥ ಶೋಕವ ಬಿಡಿಸಿ ವಿ । ವೇಕದಿ ಪಿತನಿಗೆ । ಬೇಕಾದುತ್ತರಕ್ರಿಯೆ ರಚಿಸೇ । ಲೋಕದ ಪಟ್ಟವ ಶ್ವೇತಕುಮಾರಗೆ । ಶ್ರೀಕರ ಸುಮುಹೂರ್ತದಿ ಕಟ್ಟೇ ॥ ೨ ॥

ವಾರ್ಧಿಕ್ಯ

ಉತ್ಸಾಹದಿಂದ ಜಯ ಜಯವೆಂದು । ಸಭಿಕ ಜನರುತ್ತರೋತ್ತರ ಶುಭೋದಯವ ಕೋರುತಲುಲಿಯ । ಲತ್ಯಧಿಕ ವೈಭವದಿ ಸಿಂಹಾಸನದೊಳಿಸೆಯೆ ವೀರ ಶ್ವೇತಕುಮಾರನು ॥ ನರ್ತನಾದಿ ವಿನೋದದಿಂದ ಮೋದಾನಂದ । ದುತ್ಸವಂ ಮೆರೆಯೆ ಹರಿಹರರ ಸಂಕೀರ್ತಿಸುತ । ಲುತ್ತಮೋತ್ತಮ ನಾರದಾಂಕನ್ಯೆತರಲು ನೃಪನೆದ್ದು ಸತ್ಕರಿಸುತ ॥ ೧ ॥

ರಾಗ ಸುರುಟಿ ಏಕತಾಳ

ದೇವ ಮೌನಿವರ್ಯಾ । ಶ್ರೀ ಗುರು । ದೇವ ಭುವನ ಕಾರ್ಯಾ ದೇವೇಶಾದಿ ಸು । ರಾವಳಿ ವಂದ್ಯ । ಸದಾವರ ದಾಯಕ ॥ ಪಾವನ ಮೂರುತೇ ॥ ೧ ॥ ಪಟ್ಟವೇರ್ದೆನಿಂದೂ । ನೀ ದಯ ॥ ವಿಟ್ಟು ಬಂದುದೊಂದು । ಶ್ರೇಷ್ಟವಿದೆಮ್ಮಯ । ಪಟ್ಟಣವೇ ಜಯ । ತುಷ್ಟಿಯ ಹೊಂದಿತು । ಕಷ್ಟವು ನೀಗಿತು ॥ ೨ ॥ ಮುಂದಕಿನ್ನು ಧರೆಯಾ । ನಿತ್ಯಾ । ನಂದದಿಂದ ವಿಜಯ ॥ ಹೊಂದುತಲಾಳಲು । ಚಂದದಿ ಹರಸುವ । ದಿಂದು ಕೃಪಾಕರ ॥ ವಂದಿತ ಶುಭಕರ ॥ ೩ ॥

ರಾಗ ಬೇಗಡೆ ಏಕತಾಳ

ಮೆಚ್ಚಿದೆ ಮಗನೆ ನಾ ನಿನ್ನಯ ನುಡಿಗೆ । ಹೆಚ್ಚಿನ ಶ್ರದ್ಧೆಯ ಭಕ್ತಿಯ ಬಗೆಗೆ ॥ ಪಲ್ಲ ॥ ಅಷ್ಟ ಸೌಭಾಗ್ಯದಿ ನಿನಗೇನೆಯಿಲ್ಲಾ, ದಿಟ್ಟ ಶೌರ್ಯಾಗ್ರಣಿಯೆ ಹೆ ಭುಜಮಲ್ಲ । ಸೃಷ್ಟಿಯೊಳ್ ಸಕಲ

ಸಂಪನ್ನನೆಂದೆನಿಸಿ | ಶ್ರೇಷ್ಟನಾಗಿರು ಪೂರ್ಣ ಕೀರ್ತಿಯ ಗಳಿಸೀ ॥ ೧ ॥ ಅದರೊಂದುಂಟೀಗ ಕೊರತೆಯು ಕೇಳು । ಸಾದರದೊಳು ನೀನು ಪಟ್ಟವೇರಿರಲು | ಆದಿ ಮಾಯೆಯ ಪೋಲ್ವ ಸುಂದರಾಂಗದೊಳೂ । ಪಾದ ಸೇವಿಪ ಪಟ್ಟದರಸಿಯೆಲ್ಲಿಹಳು ॥ ಮೆಚ್ಚಿದೆ ॥ ೨ ॥ ವೀರ ನೀನವರಿಂದ ಕಾಶಿ ದೇಶದೊಳು । ಶೂರಸೇನನ ಪುತ್ರಿ ಶಿವೆಯೆಂಬಳಿಹಳು ನಾರಿ ಶಿರೋಮಣಿಯವಳನು ವರಿಸೀ | ಸಾರ ಸೌಖ್ಯದೊಳಿರು ಪೋಗುವೆ ಹರಸಿ ॥ ೩ ॥

ಭಾಮಿನಿ

ಇಂತು ಹರಸುತ ಹರನೆ ಲಕ್ಷ್ಮೀ । ಕಾಂತನೇ ಜಯವೆನುತ ನುತಿಸುತ | ಲಂತ್ಯ ಮಿಲ್ಲದ ಮಹಿಮ ನಾರದ ಮುನಿಪ ಗಮಿಸಲ್ಕೇ ॥ ಸಂತಸದೊಳಾನೃಪನು ತನ್ನಯ । ಮಂತ್ರಿಯನು ಕರದೊಸಗೆ ಕಾರ್ಯವ । ದೆಂತರಿತು ನಿಶ್ಚೈಸೆ ಕಳುಹಿದ ಕಾಶಿ ಪುರಕಾಗೀ ॥ ೧ ॥

ಕಂದ ಪದ್ಯ

ಅತ್ತಲ್ ವಿಭವದಿ ಕಾಶಿ ನೃ । ಪೋತ್ತಮನಹ ಶೂರಸೇನನೋಲಗವಿತ್ತುಂ ॥ ಚಿತ್ತಾನಂದ ದೊಳಿರಲ | ತ್ಯುತ್ಸಹದೊಳಗೈದಿ ಪೇಳ್ದನಾ ಮಂತ್ರೀಶಂ ॥ ೧ ॥

ರಾಗ ಭೈರವಿ ಝಂಪೆತಾಳ

ಲಾಲಿಸೆನ್ನರಿಕೆಯನು | ಶೀಲ ಗುಣಯುತ ನೃಪನೆ | ಭೂ ಲಲನೆ ಮುಖ ಮುಕುರ । ದೊಲು ಶೋಭಿಸುವಾ ॥ ೧ ॥ ರುದ್ರಪುರ ಪತಿ ಸುಪ್ರ | ಸಿದ್ಧ ಶ್ವೇತಕುಮಾರ । ದುದ್ರ ಬಲ ಕಳುಹಿಸಿದ | ನುದ್ಯಮದೊಳೆನ್ನಾ ॥ ೨ ॥ ನಾರದನನುಜ್ಞೆಯಲಿ । ನಾರಿ ಕುಲಮಣಿ ತವ ಕು । ಮಾರಿ ಶಿವೆಯನು ವರಿಪ । ಸಾರ ಬಯಕೆಯನೂ ॥ ೩ ॥ ನಿನ್ನೊಳರುಹಲು ಬಂದು | ಬಿನ್ನೈಸಿದೆನು ಮುಂದ | ಕಿನ್ನೇನನುಜ್ಞೆಯೆನ । ಗೆನ್ನೊಮಹರಾಯಾ ॥ ೪ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭಳಿರೆ ಸಂತಸವಾದುದೀ ನುಡಿ । ಬಲು ಪರಾಕ್ರಮಿ ಸಿತ

ಕುಮಾರಗೆ । ಸಲುವಳಲ್ಲದೆ ನಮ್ಮ ಕುವರಿಯ । ನೊಲಿಸರ್‍ಯಾರೂ ॥ ೧ ॥ ಜ್ಞಾನ ನಿಧಿ ನಾರದರನುಜ್ಞಾ । ವಾಣಿಯನು ಧಿಕ್ಕರಿಸಲಾರೆನು । ರಾಣಿಯಾಗಲಿ ರುದ್ರ ಪುರಪತಿ । ಗೀಸಿತಂಬೆ ॥ ೨ ॥ ಸಫಲವಾಯಿತು ಜನ್ಮ ವಿದರಿಂ । ದಪರಿಮಿತತಾನಂದ ಸಾಧನ । ಸುಫಲದಾಯಕ ವಿಶ್ವಪತಿ ತಾ । ಕೃಪೆಯಗೈದಾ ॥ ೩ ॥ ಕರಮು ಜ್ಯೋತಿಷರನ್ನು ಬಳಿಕಾ । ಧರಣಿಪತಿ ಸುಮೂರ್ತವರಿಯುತ । ಬರುವ ದಾದಿನಕೆಲ್ಲ ದಿಬ್ಬಣ । ವೆರಸಿ ನೀವೂ ॥ ೪ ॥ ಯೆನುತ ಕಳುಹಲು ಬಂದು ಮಂತ್ರೀ । ಶನು ಸಮಸ್ತವನರುಹೆ ನೃಪ ದಿ । ಬ್ಬಣವನೆರಹುತಲಾ ಮುಹೂರ್ತ । ಕ್ಕೆಣಿಸಿ ಪೊರಟಾ ॥ ೫ ॥

ರಾಗ ಸಾಂಗತ್ಯ ರೂಪಕತಾಳ

ದಿಬ್ಬಣ ಸಹಿತಲಿ ಬರಲು ಕಾಶೀಪತಿ । ಯುಬ್ಬುತಲಿದಿರು ಗೊಂಡವರಾ । ಕಬ್ಬು ಬಿಲ್ಲನ ಸತಿಯಂತಿಪ್ಪ ಶಿವೆಗೆ ಪ । ರ ಬ್ರಹ್ಮ ರೂಪ ನೀನೆಂದು ॥ ೧ ॥ ಶ್ವೇತಕುಮಾರಗೆ ಧಾರೆಯನೆರೆಯುತ । ಚಾತುರ್ಥಿಕಾದಿ ಸತ್ಕಾರ್ಯ । ಸ್ವಾತಿಶಯದಲಿ ನಿರ್ವಿಘ್ನದಿ ನೆರ ವೇರ । ಲಾತನು ಬಳಿವಳಿ ಸಹಿತಾ ॥ ೨ ॥ ಬಾಳಿ ಸೌಖ್ಯದಿ ದಂಪತಿ ಗಳೆಂದು ಹರಸುತ್ತ । ಲೀಲೆಯಿಂ ಬೀಳ್ಕೊಡಲವರ । ಬಾಲೆಯ ನೊಡಗೊಂಡು ಶ್ವೇತ ಕುಮಾರನು । ಬಾಳ ಸಂಭ್ರಮದಿಂದ ಪೊರಟ ॥ ೩ ॥

ಭಾಮಿನಿ

ಮುನಿವರರ ಲಾಲಿಸುವದೀತೆರ । ಜನಪ ಶ್ವೇತಕುಮಾರ ಬರುತಿರ । ಲೆನಿತು ಬಣ್ಣಿಪೆ ಮುಂದಕೊಂದಾರಣ್ಯವೆಸದಿರಲು ॥ ವನಜ ಗರ್ಭನ ಸೃಷ್ಟಿಯೊಳು ಪೊಸ । ತೆನಲು ಭೀಕರ ದನುಜೆ ದುರ್ಜಯ । ದನುಜೆ ದುರುಳೆ ಕರಾಳಲೋಚನೆ ಬಂದಳಾ ಭರ್ಜಟಿಸಿ ॥ ೧ ॥

ರಾಗ ಮುಖಾರಿ ಅಷ್ಟತಾಳ

ಆರಿದಿರಾದವರೂ । ನರಾಧಮ । ರ್‍ಯಾರಿದಿರಾದವರೂ । ಘೋರ ಕಾನನದೊಳಗೆ ನಮ್ಮಸ । ವಾರಿಗಿದಿರಿನೊಳಿಂತು ಬರ್ಪವ । ರ್‍ಯಾರು

ಯಮುನೆಡೆ ಸೇರುವಂದದಿ । ನಾರಿ ಮಕ್ಕಳು ಸಹಿತ ಭಲೆ ಭಲೆ ॥ ೧ ॥ ಮನುಜ ಮಾಂಸವ ಮೆಲದೆ ಕೆಲದಿನ । ವೆಣಿಕೆಗಾಯಿತು ಬಂದು ದೊಳ್ಳಿತು । ಮನುಮಥಾರಿಯ ದಯದೊಳೊದಗಿತು । ದಿನಿತು ಮಾರ್ಬಲ ಜನ್ಮ ಸಫಲವು ॥ ೨ ॥ ರುಂಡ ಮುಂಡವ ಬೇರೆ ಬೇರೆ । ತುಂಡು ತುಂಡನೆ ಗೈದು ಮಾಂಸದ । ಖಂಡಗಳ ಹಸಿ ಹಸಿಯ ನುಂಗುವೆ । ನುಂಡು ತೇಗುವೆನಾರು ತಡವರು ॥ ೩ ॥

ಕಂದ ಪದ್ಯ

ಇನಿತಾ ಭೀಕರ ರಾಕ್ಷಸಿ । ಘನ ತರದಾರ್ಭಟೆಯಲಿ ಬರಲಿದಿರಿ ನೊಳಾಗಲ್ ॥ ವನಜಾಂಬಕಿ ಶಿವೆ ನಡುಗಲ್ । ಜನಪಾಗ್ರಣಿ ಸಿತ ಕುಮಾರ ದನುಜೆಯ ತಡೆದಂ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ನಿಲ್ಲು ನಿಲ್ಲು ದುರುಳೆ ಮುಂದ । ಕೆಲ್ಲಿ ಪೋಪೆ ನಿನ್ನ ಸಹಸ ವಿಲ್ಲಿ ಸಲುವದಲ್ಲ ತೆರಳು । ಕಳ್ಳ ರಕ್ಕಸೀ ॥ ೧ ॥ ಕಳ್ಳನೆಂದು ಪೇಳ್ವೆಯಾ ನಿ । ನ್ನಲ್ಲಿ ಶೌರ್ಯ ವಿಹುದೆ ಗೆಲಲು । ಹಲ್ಲು ಹಲ್ಲು ತಾಗದಂತೆ । ಮೆಲ್ಲುವೆನು ಫಡ ॥ ೨ ॥ ಖ್ಯಾತ್ಯ ರುದ್ರ ಪುರವನಾಳ್ವ । ಶ್ವೇತಕುವರ ನಾನು ನಿನ್ನ । ಖ್ಯಾತಿಗಂಜೆ ಬರಿದೆ ಬಗುಳ । ಲ್ಯಾತಕೆ ನ್ನೊಳು ॥ ೩ ॥ ಶೋಣಿತಾಖ್ಯ ಪುರದವರಸು । ತ್ರಾಣ ದುರ್ಜಯಾಂಕನ ನುಜೆ । ದಾನವಿಯರೊಳಗೆ ಸರಿಸಮಾನರಿಲ್ಲವೂ ॥ ೪ ॥ ಸಾಕು ಸಾಕೆನು ತ್ತಲವಳ । ಕೈಗಳೆರಡ ಶ್ವೇತಕುವರ । ನಾಗ ಕಡಿದು ಕೆಡಹಿದನು ಸ । ರಾಗದಿಂದಲಿ ॥ ೫ ॥

ವಾರ್ಧಿಕ್ಯ

ಸರಿಯಾಯ್ತು ದುಷ್ಟೆಗೀಶಿಕ್ಷೆಯಿಂದೆನುತಾಗ । ಸುರರಂಬರದಿ ಪುಷ್ಪ ವೃಷ್ಟಿಯಂ ಸುರಿಸುತಿರೆ । ದುರುಳೆ ಕೂಗುತಲತ್ತ ಲೊರೆವೆನಣ್ಣನಿಗೆಂದು ಗಮಿಸಲಿತ್ತಲು ನೃಪತಿಯೂ ॥ ಹರುಷದಿಂಸತಿ ಸಹಿತಲೈದಿ ಪುರವರಕಾಗಿ । ವರಮುಹೂರ್ತದಿ ಗೃಹ ಪ್ರವೇಶವಂ ಗೈಯೆ ಜಯ । ಕರ ವರದಿ ತುಂಬಿತಾ ಪಟ್ಟಣವೆ ಮಂಗಳ ಮಹೋತ್ಸವಾನಂದದಿಂದಾ ॥ ೧ ॥

ಭಾಮಿನಿ

ಮುಂಗಥೆಯ ನಾಲಿಪುದು ಮುನಿಗಳ | ವಿಂಗಡಿಸಲಾರ್ಗಳವು ವಿಧಿಲಿಪಿ ಯುಂಗವನು ನೃಪಗಾಯ್ತು ಬಯಕೆಯು ವನವಿಹಾರದೊಳೂ ॥ ಸಿಂಗರದ ಬೆಡಗಿನಿಂದ ಪೊರಟಾ । ತುಂಗ ಭುಜಬಲವನದ ಸಿರಿ ಸೊಬ | ಗಿಂಗೆ ತಲೆ ಮಾಗುತ್ತಲೀಕ್ಷಿಸುತಿರ್ದ ಮನದಣಿಯೇ ॥ ೧ ॥

ರಾಗ ಆರ್ಯ ಸವಾ

ತುಸು ಮೂರ ದಿನದ । ಕುಸುಮದ ಗಂಧವ । ಪಸರಿಸಿ ಸುಮಗಳ ಕೊಯ್ಯುತಲೀ | ಬಿಸಜದಳಾಕ್ಷಿ ತ್ರಿಲೋಕ ಸುಂದರಿಯೆಂಬ । ಪೊಸ ಜವ್ವನದಬಲೆಯು ಬರಲೂ ॥ ೧ ॥

ಕಂದ ಪದ್ಯ

ಅಬಲಾಮಣಿ ಮಾರನರಗಿಣಿ । ಯಬುಜಾಂಬಕಿ ರಂಭೆ ಯೂರ್ವಶಿ ಯರಂಪಳಿಪವೋಲ್ ॥ ಸೊಬಗಿಂ ಮೆರೆಯಲ್ಕಂಡಾ | ಸುಬಲಂಗಗಜನ ಬಾಣ ತಾಗಲ್ಕೆಂದಂ ॥ ೧ ॥

ರಾಗ ಯಮುನಾ ಕಲ್ಯಾಣ ಅಷ್ಟತಾಳ

ಇವಳ್ಯಾರಿದರರೆ ಮಂಜುಳ ಗಾತ್ರೇತ್ರೈ | ಭುವನ ಮೋಹಿನಿ ಸಾರಸನೇತ್ರೆ ॥ ಪಲ್ಲ ॥ ಮೊಗ ಚಂದಿರನ ಬಿಂಬ ಹೊರತಲ್ಲಾ । ಚೆಲ್ವ । ನಗೆಯದು ಚಂದ್ರಿಕೆಯಹುದಲ್ಲಾ । ಸೊಗಸಿನ ಮುಂಗುರುಳ್ಮರಿದುಂಬಿ । ಬಪ್ಪ | ಬಗೆ ನೋಡೆ ನಲಿವಳ್ಯವನ ದುಂಬಿ ॥ ೧ ॥ ಶೃಂಗಾರ ಬೆಡಗಿನ ಶುಕವಾಣೀ । ಮಾ | ತಂಗ ಗಾಮಿನಿ ಸರ್ಪನಿಭವೇಣೀ । ತುಂಗ ಪಯೋಧರೆ ಸುಕಪೋಲೆ | ಇವ | ಳಂಗ ಸಂಗದ ಭಾಗ್ಯವದು ಮೇಲೆ ॥ ೨ ॥ ಆಹಾ ನಾನಿಲ್ಲಿ ಬಂದುದು ಪುಣ್ಯ । ಇಂಥ । ಮೋಹಿನಿಗಾಗಲು ಕಾರುಣ್ಯಾ ದೇಹ ಸಾಫಲ್ಯ ವಕ್ಕದರಿಂದ | ಪ್ರೇಮ । ಮೋಹದಿ ಮಾತನಾಡಿಸೆ ಚಂದ ॥ ೩ ॥

ರಾಗ ಕಲ್ಯಾಣಿ ಅಷ್ಟತಾಳ

ನಾರೀ ಬಲು ವೈ । ಯ್ಯಾರೀ ಸೀ ನಾರೀ । ದಾರಿಯೊಳೇನ್ ಸ್ವಾರಿ |

ಸಾರ ಮನೋಹರಿ । ಸಾರ ಸಾಕ್ಷಿಸರಿ । ಯಾರಿಲ್ಲವು ನಿನ । ಗೀರಸೆಯಲಿ ಸರಿ ‖ ಪಲ್ಲ ‖ ನಿನ್ನಯ । ಪಿತ । ನಿನ್ನೆಲ್ಲಿ ಹನ್ನಾರವ । ನಿನ್ನ ಸುಗುಣ ಮಣಿಯೇ । ಸಂಶಯ । ವೆಣ್ಣ ಜೋಡನವ । ಕನ್ನೆ ಮನ್ನಿತನ । ಪುಣ್ಯಕಿಲ್ಲವೆಣಿಯೇ । ನಿರ್ಣಯಾ । ತಿಳಿದಿಲ್ಲ ವೆಲ್ಲನುಡಿ । ನನ್ನಿಯಾ । ರಮಣೀಯ ಕಾಂತಿಯ । ರನ್ನದ ಕನ್ನಡಿ । ಕೆನ್ನೆಯ ಶುಭ ಸಂ । ಪನ್ನಿಯ ಕಾಮಿನಿ । ರ ನ್ನೆಯ ಮೋಹಿನಿ ‖ ನಾರೀ ‖ ೧ ‖ ಸೋತೆನು । ನಿಂ । ನೀ ತೆರ ಸೊಬಗಿನ । ರೀತಿಗಾಗಿ ಚದುರೇ । ನಾನೀ । ಭೂತಳೇಂದ್ರ ವರ । ಕ್ಷೀತಕುವರ ಧುರ । ಖ್ಯಾತನ್ಯಾರ್ಗುಣ ಬೆದರೇ । ದಾತನೂ । ಸತ್ಯಾತ್ಮ ಸಜ್ಜನ । ನಾಥನೂ । ಪರಿಸೆನ್ನ ನೀ ಸು । ಪ್ರೀತಳಾಗು ನಿರ್ । ಭೀತಳಾಗು ವ್ಯಾಧ । ಮಾತನಾಡೆ ಮದ । ನಾತುರವನು ಬಿಡು ‖ ನಾರೀ ‖ ೨ ‖

ರಾಗ ಭೈರವಿ ಝಂಪೆತಾಳ

ಲೋಕೇಶ ಕುವರಿ ತ್ರೈಲೋಕ ಸುಂದರಿಯು ನಾ । ನಾ ಕಮಲ ಭವನೆನ್ನ । ನೀ ಕಡೆಗೆ ಕಳುಹಿ ‖ ೧ ‖ ಸ್ವೇಚ್ಛೆ ಯಿಂದಿರಲು ಬಗೆ । ಮೆಚ್ಚರಿಸಿ ನೇಮಿಸಿಹ । ನಿಚ್ಚಿಸಿಹುದ್ಯಾಕೆನ್ನ ಹುಚ್ಚುತನ ನಿನಗೇ ‖ ೨ ‖ ಸುರಪಾಲ ಮುಖ್ಯಸುರ । ವರರೆನ್ನ ಸೌಂದರ್ಯ । ಸುರುಚಿರಾಲಂಕೃತಿಗೆ । ಮರುಳಾಗುತಿಹರೂ ‖ ೩ ‖ ಇನಿತಿರಲು ನಿನ್ನ ಪಾ । ಡೆನಗೇನು ಮನು ಮಥನ । ಮೊನೆಯಂಬಿ ನುರಿಗ್ಯಾಕೆ । ಘನತೆಯನು ಕಳವೇ ‖ ೪ ‖ ಪೋಗಿ ನಿನ್ನರಮನೆಗೆ । ಭೋಗಿಸೈ ಶೌರ್ಯ ಸುಖ । ಸಾಗು ನಡೆ ಸರಿಯಲ್ಲ । ಹೀಗೆಂಬುದೆಲ್ಲಾ ‖ ೫ ‖

ರಾಗ ಕೇದಾರಗೌಳ ಝಂಪೆತಾಳ

ಥರವಲ್ಲ ಬಾಲೆ ನಿನಗೇ । ಇಂತು । ಧಿ ಕ್ಕರಿಸುವುದು ಸುಮ್ಮ ನೆನಗೆ । ಭರಿತ ಯವ್ವನ ತುಂಬಿದೆ । ನಿನ್ನಂಥ । ತರುಣಿಯೀ ತೆರ ನೆಂಬುದೇ ‖ ೧ ‖ ಅಷ್ಟ ಸೌಭಾಗ್ಯದೊಳಗೇ । ಸೌಂದರ್ಯ । ಪುಷ್ಟಿ ತನು ಮೋಹದೊಳಗೇ । ಬಿಟ್ಟಲ್ಲ ಸುರಪಾಲಗೇ । ನಾನೆಂಬು । ದಿಷ್ಟರಿತೆ ನೆರೆಯೊಮ್ಮೆಗೆ ‖ ೨ ‖ ಸಿರಿ ಭಾಗ್ಯ ಸೌಂದರ್ಯದೀ ।

ಕೊರತೆ ಕಂ । ಡೊರೆದುಪಲ್ಲದು ಧೈರ್ಯದಿ । ಮರೆತು ಬಿಡು ಮರುಳಾಟವಾ | ದೇವ ಸುಂ । ದರಿಯಾನು ಕೊಡೆ ಕೂಟವಾ ॥ ೩ ॥ ದೇವ ಸುಂದರಿಯೆಂಬುದಾ । ಮನದೊಳಗೆ । ಭಾವಿಸಿಯೆ ನಾ ನಂಜಿದಾ । ಭಾವ ವಿದು ಛಲವ್ಯಾತಕೇ । ಕೂಡೆನ್ನ | ಬಾ ವನಜ ಮುಖಿ ನಿಮಿಷಕೇ ॥ ೪ ॥ ಆದರೆಲೆ ಭೂಪ ನಿನ್ನಾ । ಸೌಭಾಗ್ಯ | ಮೇಧಿನಿಯಸೆಲ್ಲ ಮುನ್ನಾ | ನೀ ಧಾರೆಯೆರದು ಕೊಡಲು । ಕೂಡುವೆ । ವಿನೋದದಿಂದಲಿ ರಮಿಸಲೂ ॥ ೫ ॥

ಭಾಮಿನಿ

ಮತ್ತ ಕಾಶಿನಿಯರ ಚರಿತ್ರವು । ಚಿತ್ರವಲೆ ತ್ರೈಲೋಕ ಸುಂದರಿ । ಯೆತ್ತಿದಾ ನುಡಿಯಮೃತ ಬಿಂದಿನೊಲಾಯ್ತು ನೃಪವರಗೇ ॥ ಯಿತ್ತೆಸಿದೊ ಭಾಷೆಯನು ನಿನಗೆ ಸ | ಮಸ್ತ ಭಾಗ್ಯದ ಧರೆಯ ನೀವೆನು | ದಾತ್ತತೆ ಯೊಳೊಲಿದೆನ್ನ ರಮಿಸೆನಲೊಪ್ಪಿದಳು ಬಾಲೆ ॥ ೧ ॥

ಕಂದ ಪದ್ಯ

ಸುದತೀ ಮಣಿಯೊಡನಾಗಲ್ । ಮುದದ ವಿಲಾಸಕ್ಕೊದಗುತ ಶ್ವೇತ ಕುಮಾರಂ ॥ ವಿಧ ವಿಧದಾನಂದದಿ ಸುಖಿ । ಸಿದನೆಲ್ಲವ ಮರೆದು ಕಾಮ ವಶನಾಗೀರ್ದಂ ॥ ೧ ॥

ರಾಗ ಕಾಂಭೋಧಿ ರೝಂಪೆತಾಳ

ಇತ್ತಲಿಂತಿರುತಿರಲಿ । ಕತ್ತ ಶೋಣಿತ ಪುರದಿ । ಧೂರ್ತದುರ್ಜಯ ನಧಿಕ ಮದದಿ | ಮತ್ತಖಳ ಮೊತ್ತದಿಂ । ದಿತ್ತ ನೋಲಗವ ಕಚಿ । ವಾಪ್ತ ಜನರೊಗ್ಗಿನಲಿ ಮುದದಿಂ ॥ ೧ ॥ ಎಡ ಬಲವ ನೋಡುತಲಿ | ಸಡಗರದಿ ವೀರ ಖಳ । ರೊಡನೆಂದ ನಿಸಿತು ಸೌಭಾಗ್ಯ । ಬಿಡುಗಣ್ಣ ರೆರೆಯುಗಿ । ಲ್ಲೊಡೆಯುರ್ಯ್ಯಾರಿನ್ನುಂತೆ । ಪೊಡವಿ ಮೂರರೊಳೇನು ಭಾಗ್ಯ ॥ ೨ ॥ ಸಂಗರದೊಳೆನ್ನುನುರ । ಣಾಂಗಣದೊಳಿದಿರಿಸಲು ತಂಗದಿರ ಧರನಿಗಳ ವೆನುತ । ತುಂಗ ಬಲ ಸಿರಿ ಮಾನ | ಭಂಗಮುರುಚಿಯೋಜನ । ತಂಗಿ ನಡೆತಂದಳಾ ಸಭೆಗೇ ॥ ೩ ॥

ರಾಗ ಭೈರವಿ ಅಷ್ಟತಾಳ

ಯೇನಿದೇನಿದು ತಂಗಿಯೇ | ನಿನ್ನಯ ಕೈಗ । ಳೇನಾಯ್ತು ಲಲಿತಾಂಗಿಯೇ | ದಾನವ ಕುಲದ ವಶೌಳಿ । ನಾಸಿರೆ ಸಿನಗಿಂತ । ಹಾನಿ ಗೈದರ್‍ಯಾರು ॥ ೧ ॥ ಸುರರೋ ಕಿನ್ನರರೋ ಪೇಳು । ಅಲ್ಲದಡಾ ಶಂ । ಕರನೊ ವಿಘಾತಿಗಳು । ಹರಿಬ್ರಹ್ಮರಾಗಲಿ | ಗರಗರನವರ ಕಂ । ಧರವನು ತರಿಯುವೆನೂ ॥ ೨ ॥ ತಂಗಿ ನೀನಂಜದಿರು | ತ್ರೈಲೋಕವ | ನುಂಗಬಲ್ಲೆನಗಿದಿರು । ಹಿಂಗದ ಭಟರಿಲ್ಲ | ಭಂಗವ ಗೈದವ | ರಂಗವ ಪೇಳಬಲೇ ॥ ೩ ॥

ರಾಗ ಭೈರವಿ ಝಂಪೆತಾಳ

ಅಣ್ಣ ಲಾಲಿಸು ನರರ | ತಿನ್ನಬೇಕೆಂಬಾಸೆ । ಯೆನ್ನಮನ ಕಾಗಲಾ । ರಣ್ಯದೊಳು ಪೊರಟೇ ॥ ೧ ॥ ಸಾರುತಿರಲೊಂದು ಕಾಂ | ತಾರದೊಳಗೋರ್ವ ಸುಕು । ಮಾರ ಪರಿವಾರ ಸಹ । ದಾರಿಗಿದಿರಾದಾ ॥ ೨ ॥ ಕಂಡು ನಾ ತೋಷದಲಿ । ಖಂಡಿಸುವೆನನು ತನಿಲೆ । ಖಂಡ ಪರಶುವ ರೋಷ | ಗೊಂಡು ನರ ಪೋರಾ ॥ ೩ ॥ ಈ ತೆರದಿ ಕರಗಳನು । ಘಾತಿಸಿದ ರುದ್ರಪುರ | ದಾತ ಶ್ವೇತ ಕುಮಾರ । ದಾತನೆಂದರಿದೆ ॥ ೪ ॥ ಪರಿಣಯದಿ ಶಿವೆಯೆಂಬ । ತರುಣಿಯನು ವರಿಸಿ ಬಹ । ಬರವವನು ಸೊಬಗೇನ | ನೊರವೆನಾ ಸತಿಯ ॥ ೫ ॥ ರಂಭೆಯೂರ್ವಶಿಯರೆಂ | ದೆಂಬ ನಾರಿಯರೆಲ್ಲ | ಕಂಬು ಕಂಧರೆಯ ಕಾ | ಲ್ಗಿಂ ಬಪ್ಪರೆಲ್ಲಾ ॥ ೬ ॥ ಪೋಗಿ ನೀನಾನರನ । ಸಾಗಿಸುತ ಯಮನೆಡೆಗೆ । ನಾಗವೇಣಿಯ ತಂದ । ರಾಗ ಬಹುದಣ್ಣಾ ॥ ೭ ॥

ಭಾಮಿನಿ

ಘೋರ ದಾನವಿಯೆಂದ ನುಡಿಗಾ | ವೀರಮುರ್ಜಯನೊಪ್ಪಿ ಖಳ ಪರಿವಾರ । ದೊಡ್ಡ ಸೈದುವೆನೆನುತ್ತಲಿ ಪೊರಡೆ ಕಂಡಾಗ ॥ ಭೂರಿ ಭುಜ ಬಲದನುಜಪತಿ ಸುಕು | ಮಾರಾ ಲೋಹಿತನೇತ್ರ ಘನ ಗಂ । ಭೀರನಾದದೊಳೆಂದನಾ ದಿತಿಜೇಂದ್ರಗಭಿನಮಿಸೀ ॥ ೧ ॥

ರಾಗ ಧೂರವಿ ಏಕತಾಳ

ಬೊಪ್ಪನೆ ನೀಸೆನ । ಗಪ್ಪಣೆ ಪಾಲಿಪು । ಪಪ್ಪಳಿಸುತನರನ । ತೆಪ್ಪದೆ ಪಿಡಿದೆಳ । ತಪ್ಪೆನು ಸುದತಿಯ | ನೊಪ್ಪಿಸುವೆನು ಪವಕೆ ॥ ೧ ॥
ಹರಿಹರ ಬ್ರಹ್ಮಾ । ದ್ಯರು ನಡೆತಂಪರು । ಸರಿವೆನೆ ನಾ ಹಿಂದೇ । ಹರಿಗೆಣೆಯೇ ಬಡ । ಕುರಿನೊರಜುಗಳಿರಿ । ದಿರಿಯುವೆ ನಿಮಿಷದಲಿ ॥ ೨ ॥
ಅತ್ತಿಯು ಮೇಲ್ ಕೈ । ಯೆತ್ತಿದ ಮನುಜನ । ನೆತ್ತರ ಹೀರದಡೆ । ಪುತ್ರನೆ ನಾನಿನ | ಗುತ್ತಮ ವೀರನೆ । ಚಿತ್ತಕೆ ಭಯವಿಲ್ಲಾ ॥ ೩ ॥

ರಾಗಸೌರಾಷ್ಟ್ರ ತ್ರಿವುಡೆತಾಳ

ಭಳಿರೆ ಭಾಗ್ಯದ ಮಗನೆ ನಿನ್ನಯ । ಬಲು ಸಹಸವೀರೋಕ್ತಿ ಗೊಪ್ಪಿದೆ । ಹುಲು ನರನ ತರಿದೊಟ್ಟೆ ತರುಣಿಯು । ನೆಳೆದು ತಾರೊ ॥ ೧ ॥ ನಿನಗೆ ಮಂಗಲವಾಗಳೆನುತಾ । ದನುಜಪತಿಯಪ್ಪ ಣೆಯ ಪಾಲಿಸೆ | ಘನ ಪ ರಾ ಕ್ರ ಮ ದಿ ಂ ದ ಪೊರವಂ । ಟನು ಕುಮಾರ ॥ ೨ ॥ ಕಳಕಳದು ಹಲನಾಡು ಕಾನನ । ಗಳನು ಬಲ ಸಹ ರುದ್ರಪುರ । ವನುಬಳಸಿ ಮುತ್ತಿದನೈದಿ ಸಾಹಸ । ದೋಳಗೆ ಖಳನು ॥ ೩ ॥

ಭಾಮಿನಿ

ಪುರವ ಮುತ್ತಿರಲಂತು ಮಂತ್ರಿಯು | ಹರಹರಾ ಭೂಪಾಲ ನಿಲ್ಲದ | ಪರಿಯುರಿತು ನಡೆತಂವರಾ ಖಳರೇನ ಮಾಡುವುದೂ ಧುರದಿ ಹೇಚುವ ರ್‍ಯಾರು ರಿಪುಗಳ | ತರಿವ ಬಗೆಯಿನ್ನೆಂತು ಮುಂದೇ । ನರಿಯೆ ಹಾ ಯೆನಲವನಸುತ ಸಿತಕೇತಸಿಂತೆಂದಾ ॥ ೧ ॥

ರಾಗ ಭೈರವಿ ಝಂಪೆತಾಳ

ತಾತನವರೇ ಬರಿದೆ । ಭೀತರಾಗುವದ್ಯಾಕೆ । ಘಾತುಕ ಖಳಾಧಮರ । ನಾ ತರಿದುಕೊಡುವೆ ॥ ೧ ॥ ಭೂಪನಿಲ್ಲದ ಬಗೆಯ | ನಾ ಪಾಪಿಗಳು ತಿಳಿದ | ರೇ ಪಂದೆಗಳ ಸುಪ್ರ । ತಾಪವನು

ನೋಳ್ಪೇ ॥ ೨ ॥ ಹುಟ್ಟ್ಯೂರಿಗೀಪರಿಯ । ಕಷ್ಟವನು ಕೊಟ್ಟವರ । ಕೆಟ್ಟವರ ತರಿಯದಿರೆ । ದಿಟ್ಟತನವ್ಯಾಕೆ ॥ ೩ ॥ ಉತ್ಪನ್ನವನು ಪಾಲಿ । ಸಿಪ್ಪ ದೊರೆಗಾಗಿ ಹ್ಯೊ । ದಪ್ಪಳಿಸಿ ಬಹೆ ಕಳುಹಿ । ಅಪ್ಪಣೆಯ ನಿತ್ತೂ ॥ ೪ ॥ ಯಿಂತೆನಲಿಕೆಲಿ ಮಗನೆ । ಸೀಂತಿಳಿಯೆ ಚಿಕ್ಕವನ । ನಂತ ಬಲ ಖಳರ ಗೆಲು । ವಂತ ಹವನೆಂತೂ ॥ ೫ ॥ ತರಳನಾದರ ದೇನು । ಸರಳ ವೊನೆಯುರುಚಿಸುನು । ದುರುಳರೊವ್ಮ್ಯೆಗೆ ಸಹಿಸಿ । ತೆರಳುವುದ ನೋಳ್ಪೆ ॥ ೬ ॥ ಆದರೆಲಿ ಮಗನೆ ಶಿವ । ಕಾಮುಕೊಳ್ಳಲಿ ನಿನ್ನ । ಸಾದರದಿ ಜೈಸೆನಲು । ಪೋದಪದಕೆರಗಿ ॥ ೭ ॥

ಕಂದ ಪದ್ಯ

ಮಾರ್ಬಲ ಸಹಿತಾಕುವರಂ । ಕರ್ಬುರ ಸೈನ್ಯವ ಬಡಿದೊಡ ನಪ್ಪಳಿಸುತ್ತಂ ॥ ಉರ್ಬಲು ಲೋಹಿತನೇತ್ರಂ । ಪೆರ್ಬುಲಿಯೋಲ್ ಗರ್ಜಿ ಸುತ್ತಮಾರಾಂತೆಂದಂ ॥ ೧ ॥

ರಾಗ ಮಾರವಿ ಏಕತಾಳ

ಆರೆಲವೊ ನರ । ಪೋರನೆ ನಮ್ಮಯ । ವೀರರ ಸೋಲಿಸುತ । ಸಾರುವದೆಲ್ಲಿಗೆ । ಹೀರುತ ಪ್ರಾಣವ । ಸೇರಿಪೆ ಯಮನೆಡೆಗೆ ॥ ೧ ॥ ಸಿತಕೇತನು ನಾ । ನತುಲ ಬಲಾಢ್ಯನು । ಪೃಥಿವಿಪ ಸಚಿವನಿಗೆ । ಸುತನಹೆ ನೀನಾ । ರತಿಬಲ ಸಹ ಬರೆ । ಕಥೆಯೇನದ ಪೇಳು ॥ ೨ ॥ ವಿಸ್ತೃತ ಶೋಣಿತ । ಪತ್ರನ ದೊಡೆಯನ । ಪುತ್ರ ಲೋಹಿತನೇತ್ರ । ಪೃಥ್ವಿಪತಿಯ ಬಡಿದೊತ್ತಿಯುವನ ಸತಿ । ಗೆತ್ತಲು ಬಂದಿಹೆನೂ ॥ ೩ ॥ ಹಮ್ಮಿನ ಖಳ ನೀ । ನೆಮ್ಮರಸನ ಬಗೆ । ಯೊಮ್ಮೆಗೂ ತಿಳಿಯುವೆಯಾ ದು । ರ್ಮತಿಯೊಳು ನುಡಿ । ದಮ್ಮನ ವಚನವ । ಮಾರ್ಮಲೆಯಲು ಕೊಲುವೇ ॥ ೪ ॥ ಕೊಲುವವನೇ ನೀ । ಮುಲುನರ ನೊರಜುವೆ । ಹಲುಗಳ ಮುರಿ ದೀವೆ । ಬಿಲು ಶರವೇಕ್ಷಿಯು। ಬಲು ಶೌರ್ಯದ । ನೆಲೆಯನು ನೀ ತಿಳಿಯೋ ॥ ೫ ॥

ರಾಗ ಭೈರವಿ ಏಕತಾಳ

ಯೆನೆ ಕೇಳುತ ಸಿತಕೇತಾ । ತಾ । ನನಿಲಾಸ್ತ್ರವ ಬಿಡೆ ಘೋರ್ತಾ ।

ಫಣಿಶರದಿಂವದ ತರಿಯೆ | ಬಿಳಿ । ಕನಲಕಳಂಬವನೆಸೆಯೇ ॥ ೧ ॥ ಜಲಬಾಣದೊಳದ ಮುರಿದು । ಆ | ಖಳಪತಿಯತಿ . ಬೊಬ್ಬಿರಿದೂ । ನಲಿಯಲು ತಿಮಿರಾಶುಗವಾ । ಬಿಡೆ | ಗೆಲಿದನು ರವಿಯಿಂ ಶರವಾ ॥ ೧ ॥ ಬಳಿಕಾ ಖಳ ಕೋಪವಲೀ । ಮಾ | ರ್ಮಲೆಯುತ ಗಿರಿಬಾಣವಲಿ | ಬಳಲಿಸಲಾ ಸಿತಕೇತೂ । ಹಿಂ । ದುಳಿದೋಡಿದ ತಾ ಸೋತೂ ॥ ೩ ॥

ವಾರ್ಧಿಕ್ಯ

ಚಿತ್ತವಿಸಿ ಮುನಿವರರು ಸಿತಕೇತ ಸೋತೋಡೆ | ಮತ್ತೆ ಖಳನೊಳು ಸೆಣಸುವವರಿಲ್ಲದಿರೆ ನೃಪನ । ದೆತ್ತಲಡಗಿದನೆನುತ ಧೂರ್ತನರಮನೆ ಸೇರಿ ಶಿವೆಯ ಕೈಸೆರೆ ಪಿಡಿಯುತಾ || ಉತ್ತಮ ಸುವಸ್ತುಗಳನ್ನೆತ್ತಿ ಪಿತನೆಡೆಗಾಗಿ । ವಿಸ್ತಾರ ಬಲಸಹಿತಲ್ಯೈದಲಿತ್ತಲು ವನದಿ । ಪೃಥ್ವಿಪತಿ ತ್ರೈಲೋಕ ಸುಂದರಿಯ ಬೆರಸಿರಲು ನಾರದಂ ನಡೆತಂದನೂ || ೧ ||

ರಾಗ ಸಾಂಗತ್ಯ ರೂಪಕತಾಳ

ಮುರಹರ ಪುರಹರ । ಗಿರಿಧರ ಶಶಿಧರ । ಶರಣೆಂದು ನುತಿಸಿ ನಾರದನೂ । ಬರಲು ದೂರದಿಕಂಡು | ಬೆರಗಾಗಿ ಭೂಪಾಲ । ತ್ವರಿತದೊಳಿದಿರುಗೊಂಡಾಗ ॥ ೧ ॥ ಕುಶದಾಸನವನಿತ್ತು । ಕುಶಲವೆ ಹೇ ದೇವ । ಋಷಿಗಳೇ ಪೇಳಿರೆಂದೆನುತಾ । ಬೆಸಗೊಳುತಿರೆ ನಿನ್ನ | ಪೊಸ ರೀತಿಯೇನಿದು । ವ್ಯಸನ ಗುವದೆಲ್ಲ ನೆನದೂ || ೨ || ಹಾ ಕುಮಾರನೆ ನೀನು । ಯಾಕಿಲ್ಲಿ ತಂದೇ । ಶ್ರೀಕರಶಿವೆಯನು ಬಿಟ್ಟೊ | ಆ ಕಡೆ ಶೋಣಿತಪುರ ದೊಡೆಯುನ ಸುತ । ಪೋಕತನ ದೊಳಲ್ಲಿ ಬಂಪೂ ॥ ೩ ॥ ಪುರವ ಮುತ್ತುತಲೆಲ್ಲ | ವರನು ಸೋಲಿಸಿ ನಿನ್ನ । ತರುಣಿಯು ಕೈಸೆರೆ ಪಿಡಿದೂ | ತೆರಳಿರ್ಪನಿನ್ನಾದ | ರರಿತು ನೀನೈದಿ ದು । ಷ್ಟರ ಕೊಂದು ಸತಿಯುನು ಬಿಡಿಸೂ || ೪ ||

ಕಂದ ಪದ್ಯ

ನಾರದನಿಂತೆಂದಂಬರ । ಕೇರಿದ ಹರಿಹರರ ಕೀರ್ತನೆಯ

ಗೈಯ್ಯುತ್ತಂ ॥ ವೀರಂ ಮನದೊಳ್ ಮಃಬಿಸಿ । ಹಾ ರಮಣೀ ಮಣಿಯೆ ಹಾಯೆನುತಲಳಲಿದನು ॥ ೧ ॥

ರಾಗ ನೀಲಾಂಬ್ರ ತ್ರಿವುಡೆತಾಳ

ಹಾ ರಮಣೀ ಮಣಿಯೇ । ಮಂಜುಳ ರತ್ನ । ಹಾರೆ ಮೋಹದ ಕಣಿಯೇ । ಮಾರನ ಕೈಯ ಕ । ಠಾರಿ ವೈಯ್ಯಾರಿ ವಿ । ಚಾರಿ ಮನೋಹರಿ । ಸಾರಮಂಗಲಕರಿ ॥ ೧ ॥ ಯಾಕೆ ನಾನಿಲ್ಲಿ ಬಂದೇ । ನಿನ್ನನು ಬಿಟ್ಟು । ಶೋಕಿಗೆನ್ನುತಲಿ ನಿಂದೇ । ಲೋಕ ನಿಂದಿಪುದು ವಿ । ವೇಕ ವಿಲ್ಲದ ಹುಲು । ಪೋಕನೆಂದೆನುತೆನ್ನ । ನ್ಯಾಕೆ ಬಂತೀ ಬುದ್ಧಿ ॥ ೨ ॥ ಖಳನೇನೇನನು ಗೈದನೋ । ಅಯ್ಯಯ್ಯೋ ಯೆನ್ನ । ವಲಿಸಿ ಹೀಗಾದುದಿನ್ನೋ । ಫಲವೇನು । ಬಳಲಲೂ । ಕೊಲುವೆನೆಂತಾದರಾ । ತಿಳಿಗೇಡಿಗಳನ್ನೆಲ್ಲ । ನೆಲೆ ಯನು ಹರಬಲ್ಲ ॥ ೩ ॥

ಭಾಮಿನಿ

ಇನಿತ ಕಂಡು ತ್ರಿಲೋಕಸುಂದರಿ । ಯೆನಗೆ ನೀ ಧಾರಿಣಿಯ ಪಟ್ಟವ । ನನುಕರಿಸಿನಡೆ ನಿನ್ನ ಕಜ್ಜಕೆನಲ್ಕೆನೃಪನಾಗಾ ॥ ಯೆಣಿಸಿ ಸತ್ಯವನಿತ್ತು ಸರ್ವವ । ವಿನುತ ಮುದ್ರೆಯ ಮುದ್ರಿಕೆಯ ಕೊ । ಟ್ಟನು ನಯದಿ ನೀನಾಳು ಪೋಗೆಂದೆನುತ ಕಳುಹಿದನೂ ॥ ೧ ॥

ರಾಗ ಭೈರವಿ ಝಂಪೆತಾಳ

ಅರಸನೆಂತೆಲ್ಲವನು । ತರಳೆಗಿತ್ತ ಸುರಪತಿ । ಪುರಕಾಗಿ ಪೊರಟು ಬರು । ತಿರಲತ್ತ ಖಳನಾ ॥ ೧ ॥ ಪುತ್ರ ಲೋಹಿತನೇತ್ರ । ನೆತ್ತಿತಂದಬಲೆಯಳ । ನಿತ್ತು ಪಿತನಿಗೆ ಮಣಿದು । ಬಿತ್ತರಿಸುತೆಲ್ಲಾ ॥ ೨ ॥ ಭೂಪನಲ್ಲಿಲ್ಲ ಸುಕ । ಲಾಪಳನು ತಂದೀರ್ಪೆ । ಪಾಪಿಯಡಗಿದನೆಲ್ಲೊ । ಪೋಪುದನು ತಿಳಿದೂ ॥ ೩ ॥ ಎಂದೆನುವ ಮಗನ ನುಡಿ । ಗಂಪದಿಂ ದುರ್ಜಯನು । ಹಂದಿಯಡಗಿದರೇನು । ಮುಂದೆ ಸಿಕ್ಕುವನೂ ॥ ೪ ॥ ಮೊದಲವಳ ವರಿಸುವದೆ । ಹದನವೆನ ಗೆಂದು ಖಳ । ಸುದತಿಯಳ ಮೊಗನೋಡಿ । ಮುದದೊಳಿಂ ತೆಂದಾ ॥ ೫ ॥

ರಾಗ ಸುರುಟಿ ಏಕತಾಳ

ಮಂದಗಮನೆ ಕೇಳೂ । ನಿನಗಾ । ನಂದದ ದಿವಸಗಳೂ । ಬಂದುದು ವರಿಸುತ । ಲಂದದೊಳೆನ್ನನು । ಹೊಂದುತ ಸುಖಿ ಪುದು । ಮುಂದನವರತವೂ ॥ ೧ ॥ ನಿನ್ನ ರಮಣನೆಣಿಕೇ । ಬೇಡಿಂ । ನ್ನುನ್ನತ ಖಳಕುಲಕೇ । ಧನ್ಯತೆಯೆನ್ನಿಂ । ದೆಣ್ಣದಿರ ನ್ನರ । ಮನ್ನಿಯೆ ಗುಣಸಂ । ಪನ್ನೆಯೆ ಚೆನ್ನೆಯೆ ॥ ೨ ॥ ಆವ ಪುಣ್ಯದ ಫಲವೋ । ನಿನಗಿಂ । ನ್ನಾವದೇವನೊಲವೋ । ಭಾವಕಿ ನಿನ್ನ ಪ್ರ । ಭಾವಕೆ ಕಳೆಯೆನ । ಲಾವನಿತೆಯು ದು । ರ್ಭಾವನ್ನಿ ಗೆಂದಳು ॥ ೩ ॥

ರಾಗ ಕೇದಾರಗೌಳ ಅಷ್ಟತಾಳ

ರಕ್ಕಸಾಧಿಪಕೇಳು । ಸೊಕ್ಕಿನ ನುಡಿಗಳ । ನೊಕ್ಕಣಿಸದೆರೆ ನ್ನೊಳು । ಸಿಕ್ಕುವಳಲ್ಲ ನಾ । ಠಕ್ಕಿನ ಬಲಿಯೊಳು ಮಿಕ್ಕಿ ಮಾತಾಡದಿರೂ ॥ ೧ ॥ ಪರನಾರಿಯರ । ಬೇಟೆ ಥರವಲ್ಲ ಧರ್ಮವ । ನರಿಯದೆ ನರಕದೊಳೂ । ಹೊರಳದಿರೆಂದಿಗು । ಸ್ಮರತಾಪದೊಳು ಸಿಕ್ಕಿ । ಪರಿತಾಪಗೊಳ್ಳದಿರೂ ॥ ೨ ॥ ನಿನ್ನಂಥ ಖಳರಿಂತು ಹೆಣ್ಣಿ ನಾಸೆಗೆ ಬಿದ್ದು । ಮಣ್ಣನು ಸೇರಿಪರೂ । ಯೆನ್ನರಮನೆಗೆ ನೀ । ಮನ್ನಿಸಿ ಕಳುಹಿಸಿ । ಪುಣ್ಯದೊಳಿರು ಸುಖದಿ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಎಲೆಲೆ ಸುದತಿ ಮಣಿಯೆ ಬರಿದೆ । ತಿಳಿಯದೆನ್ನೊಳೇನ ನೆಂಬೆ । ಬಲುಮೆಗಾರ್ತಿಯುಹೆಯ ಸಾಕು । ಸಲಿಸು ಬಯ ಕೆಯಾ ॥ ೧ ॥ ಭ್ರಷ್ಟಖಳನೆ ನೀನು ಬುದ್ಧಿ । ಕೆಟ್ಟು ಮಾತನಾಡಬೇಡ । ದಿಟ್ಟತನವು ಸಲ್ಲದೆನ್ನೊ । ಳಿಷ್ಟು ಮಾತ್ರಕೂ ॥ ೨ ॥ ಅಂಬುಜಾಕ್ಷಿ ಸಾಕು ನಿನ್ನ । ಜಂಭವೆಲ್ಲ ವರಿಸಲೊಪ್ಪು । ರಂಭೆ ಮುಖ್ಯ ಸ್ತ್ರೀಯ ರೆನ್ನ । ಹಂಬಲಿಸುವರೂ ॥ ೩ ॥ ಆವರವರ ಸೇರಿ ಸುಖಿಸು । ಬಾಧಿಸದಿರು ಬರಿದೆ ಪ್ರಾಣ । ಹೋದರೊದಗಲಾರೆ ನಿನಗೆ । ಬೋಧಿಸಿದೆನಿದೊ ॥ ೪ ॥

ಭಾಮಿನಿ

ಯೇನದಾದರು ಸೇರೆನೆಂಬಾ । ಮಾನಿನಿಯ ನಿರ್ಧಾರಕಾಖಳ | ದಾನವನು ಖತಿಯಾಂತು ದಿನವೆಂಟೆತ್ತೆನವಧಿಯನೂ ॥ ಪ್ರಾಣಗೊಳ್ಳುವೆ ನೊಪ್ಪದಿರೆ ಬಳಿ । ಕಾನಲಾರೆನೆನುತ್ತ ಸೆರೆಯೊಳ । ಗಾನಿತಂಬೆಯ ನಿಡಲು ಬಂದನು ಜನಪ ಸಿತಕುವರ ॥ ೧ ॥

ಕಂದ ಪದ್ಯ

ಬಂದಾ ಶ್ವೇತಕುಮಾರಂ । ನಿಂದಬ್ಬರಿಸಲ್ ಖಳಪತಿ ವಿಸ್ಮಯದಿಂದಂ | ಚಂದಿರಧರನೋಲ್ ಗಜರುತ । ಲೆಂದಂಬಿಲ್ ಝೇವಡೆಯುತಲಾ ನೃಪನೊಡನಂ ॥ ೧ ॥

ರಾಗ ಕಾಂಭೋಧಿ ಝಂಪೆತಾಳ

ಭಳಿರೆ ಫಡ ನೀನಾರು | ಬಲು ಧೈರ್ಯದಿಂದೆಮ್ಮ । ಬಳಿ ಬಂದುದೆಂತರರೆ ಚೋದ್ಯಾ । ನಳಿನಸಖನಣುಗನಿಹ । ಹೊಳಲ ತೋರುವೆ ನಿನ್ನ । ತಲೆಯ ಕಡಿದೀಗ ನಿಮಿಷದಲೀ ॥ ೧ ॥ ಯೆನ್ನ ಕೇಳುವೆಯ ಖಳ । ಕುನ್ನಿವರ ರುದ್ರಪುರ । ವನ್ನಾಳ್ದ ಸಿತಕುವರ ನಾನು । ಪನ್ನತಿಕೆ ಯಾಕೆ ಮನ | ದನ್ನೆಯನು ಕೊಡು ಸಮರ । ವನ್ನೆಸಗಲೀಗ ಸಂಹರಿಪೇ ॥ ೨ ॥ ರುದ್ರಪುರ ಪತಿಯೆಮಮ | ಮುದ್ದು ಭಗಿನಿಯ ಕರವ | ಛಿದ್ರಿಸಿದ ಪಾಪಾತ್ಮ ನಿನಗೆ | ಸುದ್ಧಿಯಾತಕೆ ಸತಿಯ । ಮದ್ಧರವೆನಂದೆಸಗಿ । ದುದ್ಧಟತ್ವಕೆ ನರಕುಮಾರಾ ॥ ೩ ॥ ಪಥದಿ ಬಂದಡ್ಡೈಸೆ । ಮತಿಗೆಡುಕೆ ದಾನವಿಗೆ । ಮತವರಿತು ಭಂಗ ಗೈದಿಹೆನು । ಪೃಥವಿಯಲಿ ನಿಮ್ಮಂಥ । ದಿತಿಜರಿರೆ ಭಾರವದು । ಗತಿಗೆಡಿಸಿ ಸುಖವೀವೆ ಧರೆಗೆ ॥ ೪ ॥ ಹರಿಹರ ಬ್ರಹ್ಮ ಸುರ । ವರ ಮುಖ್ಯರನ್ನಿದಿರು । ಬರಲಂಜುವರು ನಿನ್ನ ಪಾಡೇ | ಹರಿಗಿದಿರೆ ಕುರಿಮರಿಯು । ಗರುಡನಿಗೆ ಹರಿಸರಿಯೆ | ಹರಿ ಮೆರೆಯೆ ಕತ್ತಲೆಯದುಂಟೆ ॥ ೫ ॥ ಪಿತ್ಥವಡರಿದೆ ತಲೆಗೆ । ಧೂರ್ತ ದಾನವ ನಿನಗೆ । ಕತ್ತರಿಪೆ ಶಿರವ ನೋಡೆನುತ | ಪೃಥ್ವಿಪತಿ ಗಿರಿಶರವ ನೆತ್ತಿ । ಬಿಡಲದ ತರಿದ । ಮತ್ತ ಖಳನಾಗ ವಜ್ರದಲಿ ॥ ೬ ॥

ರಾಗ ಭೈರವಿ ಅಷ್ಟತಾಳ

ಬಳಿಕತಿ ಕೋಪದಲಿ । ನೃಪಾಲನುಸ | ಲಿಲ ಕಳಂಬದಲಿ | ಖಳನ ತರಿವೆನೆಂದು । ಕಲಿತನವಲಿ ಬಿಡೆ । ಗೆಲಿದಾನು ಮರುತಾಸ್ತ್ರದೀ ॥ ೧ ॥ ಹಾರದಿರೆಲವೊಖೂಳ | ನಿನ್ನಯ ಸತ್ವ । ವೇರಿತೆನೊಳ್ಪಿ ಛಲ । ಸಾರವ ನೆಂದು ಹುಂ । ಕಾರದಿ ತಿಮಿರಾಸ್ತ್ರ । ಘೋರನೆ ತೆಗೆದೆಸೆದಾ ॥ ೨ ॥ ಕಂಡಾಗ ದುರ್ಜಯನು । ಸೂರ್ಯಾಸ್ತ್ರದಿ | ಖಂಡಿಸಿ ಕೆಡಹಿದನೂ । ಚಂಡ ಪರಾಕ್ರಮಿ । ಕುಂಡಲಿ ಶರ ಬಿಡ । ಲಂಡಜನಿಂ ಗೆಲಿದಾ ॥ ೩ ॥

ಭಾಮಿನಿ

ಈ ತೆರದಿ ಸಕಲಾಸ್ತ್ರಗಳ ಖಳ । ನಾಥ ಗೆಲಿದಾರ್ಭಟಿಸಿ ಪ್ರಳಯದ । ಭೂತಪತಿಯಂದದಲಿ ಕನಲುತ ದಿವ್ಯಶಕ್ತಿಯನೂ ॥ ಶ್ವೇತಕುವರನಿಗೆ ಸೆಯಲವರುರಿ । ಗಾತ್ರ ಹಾ ಹಾ ಶಿವೆಯೆ ಹಾಯೆಂ | ದೋತು ಸ್ಮರಿಸುತ ಭೂಮಿಗೊರಗಿದನೇನನುಸುರುವೆನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಇತ್ತಲೀ ತೆರನಾಗೆ ಜೈಮಿನಿ | ಪತ್ತನದಿ ಯಮರಾಯ ನೋಲಗ । ವಿತ್ತು ವಿಭವದೊಳಿರುವ ಸಮಯದಿ | ಸತ್ತ ನೃಪನಾ ॥ ೧ ॥ ಜ್ಯೋತಿ ಯನು ಯಮ ಭಟರು ತಂದುಪ | ರೇತ ಪತಿಯಿದಿರಿನಲಿ ನಿಲಿಸಲಿ । ಕೀತಗೈದಿಹ ಪಾಪ ಪುಣ್ಯದ । ರೀತಿಗಳನೂ ॥ ೨ ॥ ಚಿತ್ರಗುಪ್ತನೆ ನೋಡು ತೆಲ್ಲವ ವಿಸ್ತರದಿ ಪೇಳೆನಲು ಹೇಸ । ವ್ರೋತ್ತಮನೆ ಕೇಳೆನುತಲೀತೆರ । ಬಿತ್ತರಿಸಿದಾ ॥ ೩ ॥

ರಾಗ ಭೈರವಿ ಝಂಪೆತಾಳ

ಇವನು ಭೂಮಿಪನಾಗಿ । ಭುವನವನು ಪಾಲಿಸದೆ । ಶಿವೆ ಯೆಂಬ ಸತಿಯ ಬಿ । ಟ್ಟವಿಚಾರದಿಂದ ॥ ೧ ॥ ತ್ರೈಲೋಕ ಸುಂದ ರಿಯ | ಮೇಳಕೊದಗುತ ತನ್ನ । ಭೂಲಲನೆಯನು ಕೊಟ್ಟು । ಕಾಳು ಮಾಡಿಹನೂ ॥ ೨ ॥ ಈತ ಗೈದಿಹ ಪಾಪ । ಕೇತರವ ಶಿಕ್ಷೆಯೋ |

ನೀ ತಿಳಿಯದವನಲ್ಲ । ನೀತಿಯೊಂದಿಹುದು ॥ ೩ ॥ ಸಾವಕಾಲದೊಳಿವನು | ಭಾವ ಶುದ್ಧದಿ ಶಿವೆಯ । ಭಾವಿಸುತಲಳಿದುದದು । ಜೀವಿತದ ಪುಣ್ಯ ॥೪॥ ಯೆನಲು ಕೇಳುತ ಯಮನು । ಜನಪನೀನತಿ ಪಾಪಿ | ನಿನಗೆ ನರಕವೆ ಹೊರತು | ಘನ ಪುಣ್ಯವಿಲ್ಲ ॥ ೫ ॥ ಆದರಳಿಯುವ ಕಾಲ । ಕಾದರೂ ಶಿವೆಯೆನುತ । ಲೋದಿದಾ ಪುಣ್ಯಫಲ । ದೋದಯಕ್ಕೊಲಿದೂ ॥ ೬ ॥ ವರವನೊಂದನು ನಿನಗೆ ಕರುಣಿಸುವೆ ಬೇಡೆನಲು । ಕರಗಳೆರಡನು ಮುಗಿದು । ತರಣಿಸುತಗೆಂದ ॥ ೭ ॥

ಭಾಮಿನಿ

ಕರುಣನಿಧಿ ಕೇಳೊಂದು ರಾತ್ರಿಗೆ । ತರುಣಿಮಣಿ ರಂಭೆಯಳ ಭೋಗವ । ಕರುಣಿಸಲು ಬೇಕೆನಗೆ ವರವದೆ ಬೇರೆ ಬೇಡೆನಲೂ ॥ ತರಣಿಸುತ ನಸು ನಗುತಲಾಗಲಿ | ಕರದಿವನನವಳಿರುವ ಮನೆಯೊಳ | ಗಿರಿಸುತುದಯಕೆ ತನ್ನಿರೆನೆ ಭಟರ್ಯೈದಿದರು ಕೊಂಡು ॥ ೧ ॥

ಕಂದ ಪದ್ಯ

ರಂಭೆಯ ಮನೆಯೊಳಗಿರಿಸುತ । ಲಂಬುಜ ಸಖನುದಯ ಕಾಲ ಕೊದಗುವೆವೆನುತಂ ॥ ಮುಂಬರಿಯಲ್ ತುಸು ಸಮಯದಿ । ಕುಂಭಪ ಯೋಧರೆಯು ಕಂಡುನುಡಿಸಿದಳವನಂ ॥ ೧ ॥

ರಾಗ ಕೇದಾರಗೌಳ ಝಂಪೆತಾಳ

ಯಾರು ನೀನಿಲ್ಲಿ ಬಂದು । ಕುಳಿತಿರ್ಪ । ಕಾರಣಗಳೇನದೆಂದೂ । ಬಾರದಿಹ ಪೊಸ ರೀತಿಯ | ಕಂಡೆನವಿ । ಚಾರಿ ಮರೆತೆಯ ನೀತಿಯಾ || ೧ ॥ ನಾರಿಮಣಿ ರಂಭೆ ಕೇಳು । ಯಮನವರ । ಸಾರದಿಂ ಬಂದೆ ತಾಳೂ । ಈ ರಾತ್ರಿ ನಿನ್ನ ಕೂಡಿ । ಸುಖಿಸುವ ವಿ । ಚಾರವೆನಗಾಯ್ತು ಪ್ರಕುಥೀ ॥ ೨ ॥ ರುದ್ರಪುರವಾಳುತಿರ್ದ । ಶ್ವೇತಸುತ । ರುದ್ರ ಬಲ ಸುಪ್ರಸಿದ್ಧ । ಬಿದ್ದಿಹೆನು ನಿನ್ನಾಸೆಗೆ । ಭೋಗವಿ | ತ್ತುದ್ಧರಿಸು ಸ್ಮರತಾಪಗೇ ॥ ೩ ॥ ಹುಚ್ಚು ಮಾತಾಡಬೇಡ । ನೃಪನೆ ನಿ । ನ್ನಿಚ್ಛೆಯಿದು ಸಲ್ಲ ಗಾಥಾ ॥

ಸಚ್ಚರಿತನಲ್ಲ ನೀನು । ಹೊರತು ನರ | ನುಚ್ಚ್ಛ ನಿನಗೊಪ್ಪೆ ನಾನೂ || ೪ ||
ರಂಭೆ ನಿನಗೇನು ಮರುಳೇ । ತ್ರೈಲೋಕ । ವಂ ಬೆರಗುಗೊಳಿಸ ಬಲ್ಲೇ ।
ಕುಂಬುಕಂಠಿಣಿಯೆ ಬರಿದೇ । ನರಪಾಪಿ । ಯೆಂಜೆಣಿಕೆ ಬಿಡುಸಾರಿದೇ ॥ ೫ ॥
ಗರ್ವ ಮಾತುಗಳಾಡಲೂ । ಸಲ್ಲದೈ । ಸರ್ವತಾ ಛಲ ಮಾಡಲೂ |
ಬರ್ವಳಲ್ಲವು ಬಯಕೆಗೇ | ನೀ ಬಿಡು ಸು । ಪರ್ವರೋಲ್ಲೈಪರೆನಗೇ || ೬ ||
ಆದರೆಲೆ ಬಾಲೆ ಯಮುನಾ । ಪರಕೇನು । ಹಾದಿಯನು ಕಂಡೆಯವನಾ |
ನೀ ಧಿಕ್ಕರಿಸಲು ಕಷ್ಟ । ಆದರಿಂದ । ಸಾದರದಿ ಪಾಲಿಸಿಷ್ಟ ॥ ೭ ॥

ರಾಗ ಭೈರವಿ ಝಂಪೆತಾಳ

ಯೆನಲು ಯೋಚಿಸಿ ರಂಭೆ । ಜನಪ ಕೇಳಿನಿತಾದ । ರೆಣಿಕೆ ಯೊಂದನು ಪೇಳ್ವೆ । ನನುಕರಿಸು ನೀನೂ || ೧ || ಪಂಚಾಕ್ಷರಿಯ ಮಂತ್ರ । ಪಂಚ ಕೋಟಿಯ ಸಂಖ್ಯೆ । ಪಂಚವದನನ ಧ್ಯಾನ । ವಂಚಿಸದೆ ಮಾಡೂ ॥ ೨ ॥ ದೇಹಶುದ್ಧವದಕ್ಕು । ಮೋಹಿಸುವೆ ನಾಮೇಲೆ । ನೀ ಹೆದರಬೇಡ ಮನ । ಕಾಹುರವ ನೀಗೂ ॥ ೩ ॥

ಭಾಮಿನಿ

ಆದರದಕೇನೆನುತ ಶುದ್ಧಿಯೊ । ಳಾದಯಾಕರ ವಿಶ್ವಮೂರ್ತಿಯ । ಪಾದವನು ಸ್ಮರಿಸಿದನು ಪಂಚಾಕ್ಷರಿಯ ಮಂತ್ರದಲಿ ॥ ಆದಿವಾಕರನು ದಯ ಗಿರಿಯೊಳ | ಗಾದುದನು ಕಂಡೊಡನೆ ಯಮ ಭಟ । ರೈದಿ ಪೊರಡೆನೆ ಕದಲದಿದ್ದನು ಜಪದ ನಿಷ್ಠೆಯಲೀ ॥ ೧ ॥

ರಾಗ ಮಾರವಿ ಏಕತಾಳ

ಫಡ ಹುಲು ಮನುಜನೆ । ನುಡಿದುದ ಮರತೆಯ | ಸಡ ಗರವೇ ನಿನಗೆ । ಪಡೆಯುಸನನುಜ್ಞೆಯ ದೃಢತೆಯ ಕೆಡಿಸುವ । ಗೊಡವೆಯೆ ನಡೆಯದಿದು ॥ ೧ ॥ ತಟ್ಟನೆ ಪೊರಟೆ | ಮ್ಮೊಟ್ಟಿಗೆ ಬಾ ಕ । ಣ್ಣಿಟ್ಟೀಕ್ಷಿಸುತೇಳು । ದಿಟ್ಟತೆ ತೋರ್ದರೆ । ಕಷ್ಟದೊಳುರುಳುವೆ । ಕಟ್ಟುವೆವೀಕ್ಷಣದಿ ॥ ೨ ॥ ಕುಂಭೀಪಾಕವ । ನಂಬುವ ಸಮ

ಯದ। ಸಂಭ್ರಮ ನಿನಗಾಯ್ತು । ಜಂಭದ ಮಂತ್ರದ । ಹಂಬಲವೇನದು । ರಂಭೆಯ ಮಾಯಕವೇ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತು ಯಮ ಭಟರವನ ಜರೆಯ । ಲ್ಕಂತರದಿ ಕೈಲಾಸ ಶಿಖರದೊ । ಳಂತ್ಯವಿಲ್ಲದ ಮಹಿಮ ಗಿರಿಜಾ । ಕಾಂತನದನರಿದೂ ॥ ೧ ॥ ಶುದ್ಧಭಾವದೊಳೆನ್ನ ಸ್ಮರಣೆಯೊ । ಳಿದ್ದ ಭಕ್ತನ ಬಾಧಿಸುವ ಭಟ । ರುದ್ಧಟತ್ವವ ನಿಲಿಸದಿರಲಾ । ನಿದ್ದು ಫಲವೇ ॥ ೨ ॥ ಬಾ ಮಗನೆ ಬಾ ವೀರಭದ್ರನೇ । ಭೀಮಬಲ ಸಂಹಾರ ರುದ್ರನೇ । ಕಾಮಿನೀ ಮಣಿ ರಂಭೆಯಿಹ ಸುರ । ಧಾಮದೊಳಗೇ ॥ ೩ ॥ ಯೆನ್ನ ಪಂಚಾಕ್ಷರಿಯ ಮಂತ್ರವ । ನನ್ಯಮಾನಸವಿರದೆ ಜಪಿಸುವ । ನನ್ನು ಭಾಧಿಪ ಭಟರ ಗೆಲಿದವ । ನನ್ನು ಕಾಯೋ ॥ ೪ ॥ ಜನಕ ಬಿಡು ಬಿಡು ಗಣ್ಯವೇ ಬಡ । ಜುಣುಗುಗಳ ಪಿಡಿದಪ್ಪಳಿಸಿ ಶರ । ಣನನುಕಾವೆನುತ್ತಲಾಕ್ಷಣ । ಗಣರು ಸಹಿತಾ ॥ ೫ ॥ ಕಾಲ ಭೈರವನೊಡನೆ ಪೊರಟಾ । ಕಾಲದೂತರ ಬಳಿಯ ಬಳಸುತ । ಕಾಲ ಕಾಲನ ತೆರದಿ ರೋಷಕ । ರಾಲನೆಂದಾ ॥ ೬ ॥

ರಾಗ ಶಂಕರಾಭರಣ ಮಟ್ಟೆತಾಳ

ಕಾಲನಾಳ್ಗಳ್ಯಾಕೆ ಬರಿದೆ । ಮೇಲುವರಯುತಿಹರಿ ನಮ್ಮ । ಶೀಲ ಭಕ್ತನನ್ನು ಮುಟ್ಟ । ದೇಳಿ ಸುಮ್ಮನೇ ॥ ೧ ॥ ಸುಮ್ಮನೇಳ್ವರಲ್ಲ ನಾವು । ಧರ್ಮಯಮನನುಜ್ಞೆಯೆಮಗೆ । ಹಮ್ಮಿನಿಂದ ಕುಳಿತನ್ಯೊವ । ದೆಮ್ಮ ಕೆಲಸವೂ ॥ ೨ ॥ ಹರನನುಜ್ಞೆಗಿಂತ ಮಿಗಿಲು । ಹರಹುವವರದಾರು ನೋಳ್ಪೆ । ಸರಿಯಿರೆನುತಲೆಚ್ಚ ದಿವ್ಯ । ತರವ ಶಕ್ತಿಯ ॥ ೩ ॥

ಭಾಮಿನಿ

ವೀರಭದ್ರನ ಶಕ್ತಿಯಲಿ ಬಾ । ಯಾರಿ ಯಮನಾಳುಗಳು ಭಯದಲಿ । ಸಾರಿ ಶೈಮಿನಿಗರುಹೆ ಕೇಳ್ದಾ ಕಾಲಾ ಕೋಪದಲೀ ॥ ಘೋರ ರೂಪದೊಳೈದಿ ಪಾಶದಿ । ಧಾರುಣೀಶನ ನೆಳೆಯಲನು

ಗೊಳ । ಲಾರು ಭಟಿಸುತ ಕಾಲಭೈರವ ತಡೆದನಾ ಯಮನಾ ॥ ೧ ॥

ರಾಗ ಭೈರವಿ ಏಕತಾಳ

ಮುಟ್ಟದಿರೆಲವೋ ಯಮನೆ । ಮನ । ನಿಷ್ಠೆಯೊಳಿರ್ಪೊಡೆಯ ನನೆ । ಶಿಷ್ಟನು ಭಜಿಸುತಲಿಹನು । ಹಿಂ । ಮೆಟ್ಟುತ ನಡೆಯೈ ನೀನು ॥ ೧ ॥ ಪಾಪಿಯಿವನು ಹುಲು ನರನೂ । ಕುಂಭೀಪಾಕಕೆ ತಕ್ಕವನೂ । ಕೋಪಿಸಲ್ಯಾತಕೆ ನೀವೂ । ಆ ಕೋಪವ ತೋರಲು ನೋವೂ ॥ ೨ ॥ ಹರನಾಜ್ಞೆಯು ನಮಗಿಹುದೂ । ನೀ । ನೊರೆದರೆ ಫಲವೇನಹುದೂ । ಶರಣನ ಕಾಯದೆ ಬಿಡೆವೂ । ಮುಂ । ಪ್ಪರಿ ಯಲು ಪೊಡೆವೆನು ದೃಢವೂ ॥ ೩ ॥ ಕಡುಗಲಿಪನವೆನ್ನೊಡನೇ । ಯಾ । ಕೊಡೆಯೆನೆ ಬರಲಾ ಮೃಡನೆ । ಬಿಡೆನೆಂದೆನುತಲಿ ಹೊಡೆಯೆ । ವೈ । ಕೊಡಹುತಲವನಿಂದರಿಯೆ ॥ ೪ ॥

ರಾಗ ಭೈರವಿ ಝಂಪೆತಾಳ

ವೀರಭದ್ರನು ತಡೆದು । ಮಾರಾಂತು ಪೇಳಿದನು । ಹಾರಾಡ ದಿರು ಯಮನೆ । ತೋರು ಸಾಹಸವಾ ॥ ೧ ॥ ಬುದ್ಧಿಯಿಲ್ಲವೆ ವೀರ । ಭದ್ರ ನಿನಗ್ಯಾಕೆಮ್ಮ । ನುದ್ರೇಕಿಸುವೆ ಬರಿದೆ । ಸಿದ್ಧಿಸದು ಫಲವೂ ॥ ೨ ॥ ಮುಚ್ಚು ಮುಚ್ಚೈ ಬಾಯು । ಹೆಚ್ಚು ಮಾತಾಡಿ ದರೆ । ಕೊಚ್ಚುವೆನು ನಾಲಗೆಯು । ನೆಚ್ಚರದಿ ತೆರಳೊ ॥ ೩ ॥ ತೆರಳುವೆನು ನೋಡಿವನ । ನರಕಕೆಳೆಯುವೆನೀಗ । ಮೆರೆವರ್ಯಾರೆ ನ್ನಾಜ್ಞೆ । ಮರೆದು ಲೋಕದಲೀ ॥ ೪ ॥ ಪರಶಿವಗು ಮಿಗಿಲೆ ನೀ ಪರಿಯರಿವೆನೆನಲು ಯಮ । ನೆರಗೆ ದಂಡವ ನೆಗಹಿ । ತೆರಳಿದನು ಸೋತು ॥ ೫ ॥

ವಾರ್ಧಿಕ್ಯ

ಮುಂದೇನನೆಂಬೆನಾ ದಂಡಧರನತಿ ಕೋಪ । ದಿಂದಲಾ ಶಿವ ಗಣಗಳೆಲ್ಲರಂ ಗೆಲಿದು ಬ । ಲ್ಪಿಂದಲಾ ಭೂಪಾಲಕಗೆ ಪಾಶವಿಕ್ಕ ಲವನೊಂದೆ ಧ್ಯಾನದೊಳಿರುತಿರೆ । ಕಂದರ್ಪ ಹರನರಿದು ನಂದಿ

ವಾಹನದಿಂದ | ಬಂದು ಪಾಶವ ಬಿಡಿಸಿ ಬಲು ಭಯಂಕರನಾಗಿ ನಿಂದಿರ್ಪ ಕಾಲನಂ ಕಂಡು ಖತಿಗೊಂಡು ಮುಂಕೊಂಡು ಮುನಿ ದಿಂತೆಂದನೂ ॥ ೧ ॥

ರಾಗ ಕಾಂಭೋಧಿ ಝಂಪೆತಾಳ

ಭಳಿರೆ ಯಮ ನಿನಗಿಂತು । ತಿಳಿವಿಲ್ಲದಾಯ್ತೆ ಮತಿ | ಮಲಿನತೆಗ ಮನ ಬಂತೆ ಮರುಳೇ | ಕಳಕಳಿಸದೊಂದೆ ಮನ । ದೊಳಗೆನ್ನನರ್ಚಿಸುವ । ಸಲೆ ಭಕ್ತನಿಗೆ ಪಾಶವಿಕ್ಕಿದೆಯೆ ಮುಳಿದೂ ॥ ೧ ॥ ವೀರಭದ್ರಾದಿಗಣ । ವಾರವನು ಗೆಲಿದ ಹಂ । ಕಾರದೊಳು ನಲಿಯುತಿಹೆಯಲ್ಲಾ । ಮೂರು ಲೋಕಕದಾರು । ಕಾರಣರು ಲಯಕೆಂಬ ಸಾರವರಿಯದೆ ಹೋಯ್ತೆ ನಿನಗೆ ॥ ೨ ॥ ಕಮ್ಮಗೋಲನನುರುಹಿ । ದೆಮ್ಮ ತಿಳಿಯದ ನಿನ್ನ | ಹಮ್ಮಿಗಿದೊ ಶಿಕ್ಷಿಸುವೆನೀಗಾ । ಉಮ್ಮಳಿಸಬೇಡೆನುತ । ಲೊಮ್ಮೆ ಗರ್ಜಿಸಲರಿದು । ದಮ್ಮಯ್ಯ ಪೊರೆಯೆನುತ ಮಣಿದಾ ॥ ೩ ॥

ರಾಗ ಮಧ್ಯಮಾವತಿ ಏಕತಾಳ

ದೇವಾದಿ ದೇವರ ದೇವ ಶಂಕರನೇ । ಕಾವುದೆನ್ನನು ಭಕ್ತಜನವ ಶಂಕರನೆ ॥ ಪಲ್ಲ ॥ ವಾಸುಕಿ ಭೂಷಾ ಕೈಲಾಸ ಗಿರೀಶ । ವಾಸವನುತಪಾದ ಪಾವನ ವೇಶ । ಭಾಸುರ ಭಸ್ಮವಿಲೇಪಿತಗಾತ್ರ | ಭೂಸುರ ವಂದಿತ ಪಾವಕ ನೇತ್ರ ॥ ದೇವಾದಿ ॥ ೧ ॥ ಮತಿಹೀನನಾಗಿ ನಾ ನಿನ್ನಯ ಗಣರಾ | ಖತಿಯಿಂದ ಗೆಲಿದೋಡಿಸಿದೆ ಕ್ಷಮಿಸದರಾ ॥ ಪೃಥಿವಿಪಗವಧಿಯು ತೀರಿತೆಂದವಗೆ । ಗತಿಗೆಡಿಸಲು ಪಾಶವಿಕ್ಕಿದೆ ಕಡೆಗೇ ॥ ೨ ॥ ಅಪರಾಧವಾದರಿಂನದರನ್ನು ಕ್ಷಮಿಸೀ । ಉಪದೇಶಿಸುವತೆರ ನಡೆವೆನು ನಮಿಸಿ | ಕೃಪೆಮಾಡಬೇಕೆನ್ನ ಮೇಲೆ ಶ್ರೀ ಶಿವನೆ । ಸುಫಲದಾಯಕ ವಿಶ್ವರೂಪನೆ ಭವನೆ ॥ ದೇವಾದಿ ॥ ೩ ॥

ಭಾಮಿನಿ

ಇನಿತು ನುತಿಸುವ ಯಮನ ಭಕ್ತಿಗೆ । ಫಣಿವಿಭೂಷಣ ನೊಲಿದು ಕ್ಷಮಿಸುವೆ । ಜನಪಗಾಯ್ತಾಯುಷ್ಯವರ್ಧನ ಪೋಗು

ನೀನೆನಲೂ ॥ ಮಣಿದು ಗಮಿಸಲು ಯಮನು ಬಳಿಕಾ । ಮನುಮ ಥಾರಿಯು ನೃಪಸನಪ್ಪುತ । ಲನಘ ಸಾಕಿನ್ನೇಸು ಮೆಚ್ಚಿದೆನೆನುತ ಲಿಂತೆಂದಾ ॥ ೧ ॥

ರಾಗ ನವರೋಜು ಏಕತಾಳ

ಮೆಚ್ಚಿದೆ ನಾನೆಲೆ ಮಗನೇ | ನೀ । ನುಚ್ಚರಿಸೀ ಮಂತ್ರವನೇ । ಸ್ವಚ್ಛತೆ ಪಡೆದಿಹೆ | ನಚ್ಚಿನ ಭಜಕನೆ | ನಿಚ್ಚಟ ಭಾವವ | ದಚ್ಚರಿ ನಿನ್ನದು ॥ ೧ ॥ ಹಿಂದಿನ ದೇಹವ ಧರಿಸೀ | ನೀ । ಮುಂದಿನ್ನು ಸುಖ ವೆರಸೀ | ಹೊಂದುತಲರಸಿಯ । ಚಂದದಿ ಬಾಳಾ । ಮಂದ ಮತಿಯು ಯಮ | ಮಂದಿರ ಕಟ್ಟುತ ॥ ೨ ॥ ರಂಭೆಯು ಭೋಗವ ದಿಂದೂ । ನಿನ । ಗಿಂಬಕ್ಕೊ ಮುಂದೆಂದೂ । ಕುಂಭಿನಿಯಾಳುತ । ಲಂಬುಜ ಮುಖಿ ಸಹ । ಸಂಭ್ರಮದೊಳು ನೀ । ನಂಬಿಹುದೆನ್ನನು ॥ ೩ ॥ ಧರಣಿಯ ಕೀರ್ತಿಯೊಳಾಳೀ । ಹಲ । ವರುಷವು ಸೌಖ್ಯದಿ ಬಾಳೀ । ಬರುವುದು ಮಂಗಲ | ಕರಸವವಿಯ ಜಯ । ಕರುಣಿಸೆ ನೆನಲವ । ನೆರಗುತಲೆಂದನು ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಶಂಕರ ಶರಣಪ । ಶಂಕರ ವೈರಿ ಭ । ಯಂಕರ ಶುಭ ಕರನೇ | ಶಂಕರಿಯರಸ ಸು । ಖಂಕರ ಲಾಲಿಸು । ಶಂಖಿಯ ದೊಂದಿಹುದೂ ॥ ೧ ॥ ಲೋಕವನಾ ತ್ರೈ । ಲೋಕ ಮನೋಹರಿ । ಗಾಕೆಯ ಕೊಡುವರೇ । ನಾ ಕೊಟ್ಟಿಹೆನವಿ । ವೇಕದೊಳಂದದ | ಕ್ಯಾಕಿಚ್ಚಿಪುದಿನ್ನು ॥ ೨ ॥ ಸತ್ಯವ ಮೀರುವದುತ್ತಮವೇ ಸ । ರ್ವೋತ್ತಮ ನೀ ಪೇಳೂ । ನಿತ್ಯನಿರಂಜನ । ಮತ್ತೇನಿಲ್ಲೆನೆ | ಚಿತ್ತಜ ಹರನೆಂದಾ ॥ ೩ ॥ ಬಿಡು ಸಂಶಯವನು | ಕೊಡುವಳು ಸರ್ವವ | ನುಡಿಪುಸಿಯಾಗದಿದೂ | ದೃಢದಿಂದೆನ್ನನು ಪೊಡವಿ ಯೊಳರ್ಚಿಸಿ । ಪಡೆ ಸತ್ಕೀರ್ತಿಯನೂ ॥ ೪ ॥ ಎನುತಲಿ ಕರುಣದಿ | ಮಣಿಮಯ ರಥ ಶರ । ಧನು ತೂಣೀರಗಳಾ । ಜನಪನಿಗಿತ್ತಾ । ಗನುಪಮ ಗಮಿಸಿದ । ಘನ ತರದೊಳು ಹರಸೀ ॥ ೫

ಚಿತ್ರಜ್ವಾರಿಯು ಹರಸುತತ್ತಗಮಿಸಲು ನೃಪನಿ | ಗೆತ್ತಣಿಂದಾಯ್ತೊ ಮುಂನಿನ ರೂಪ ಹರ ಮಹಿಮೆ । ಚಿತ್ರತರ ಮಲ್ತೆ ಬಳಿಕಾ ಭೂಪ ರಂಭೆಯುಳ ಸಂಭೋಗಮಂಗಳಿಸುತಾ | ಮತ್ತವಳ ಸಹಯದಿಂ ದುರ್ಜಯನ ಪುರಕೈದು । ತರ್ಥಿಯಿಂ ಬೀಳ್ಕೊಟ್ಟು ಕೋಟೆಯಂ ದಾಟಿಮುಂ | ದೊತ್ತಿ ಬರಲರಿತು ಖಳನಣುಗ ಲೋಹಿತನೇತ್ರನಿದಿರಿಸಿದನಾ ವೀರನಾ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಭಳಿರೆ ಶ್ವೇತಕುವರ ಧುರದೊ । ಳಳಿದ ನೀನು ಬದುಕಿ ಬಂದು | ಬಲು ಸಮರ್ಥನಾದೆಯಲ್ಲ । ಬಲುಮೆ ಕಾಂಬೆನೂ ॥ ೧ ॥ ಏನೆಲಾ ಮದಾಂಧ ಖಳನೆ | ನೀನದೇನನರಿವೆ ದುಷ್ಟ । ದಾನವರನು ಕೊಲಲು ಹರನು । ತಾನೆ ಸಲಹಿದಾ ॥ ೨ ॥ ಹರನ ವರವೆ ಸಾಕುಗರ್ವ । ಮುರಿವೆ ತರಿವೆನೆಂತು ಮುಂದೆ | ಬರುವೆ ಮೆರವೆನೋಳ್ಪೆ ಶೌರ್ಯ । ದಿರವನೆಲ್ಲವಾ ॥ ೩ ॥ ಲೋಕ ಭಾರವಾಗಿ ಪುಣ್ಯ | ಶ್ಲೋಕರನ್ನು ಹಳಿದು ಮುಳಿದು । ಪೋಕರಾದ ನಿಮಗೆ ಬಾಳ್ವೆ । ಸಾಕು ಕೊಲ್ಲುವೇ ॥ ೪ ॥ ಕೊಲ್ಲುವವನೆ ನೀನು ನಿಲ್ಲು । ನಿಲ್ಲೆನುತ್ತಲಸುರನಾಗ ಮಲ್ಲತನದೊಳೆಚ್ಚ ಶರವ । ಬಿಲ್ಲಿಗೇರಿಸಿ ॥ ೫ ॥ ಬರುವ ಶರವ ಕಡಿದು ಭೂಪ । ಹರನ ನೆನೆದು ದಿವ್ಯರೋಪ । ವರುಷ ಸುರಿಸೆ ಬಿದ್ದ ಧರೆಗೆ । ದುರುಳ ದಾನವಾ ॥ ೬ ॥

ಭಾಮಿನಿ

ವೀರ ಲೋಹಿತನೇತ್ರ ಸಮರದಿ | ಸಾರೆ ಯಮನೆಡೆಗಾಗಿ ಬಳಿಕಾ । ಘೋರ ದೈತ್ಯನ ಸಚಿವ ಶಂಬರನೆಂಬ ದಾನವನೂ ॥ ಮೀರಿ ಬಹ ಸಿತಕುವರನನು ಕಂ । ಡಾರು ಭಟಿಸುತ ಸಿಂಹನಾದದಿ । ಭೂರಿ ಭುಜ ಬಲದಿಂದ ತಡದಿಂತೆಂದ ಪಲ್ಗಡಿದೂ ॥ ೧ ॥

ರಾಗ ಭೈರವಿ ಝಂಪೆತಾಳ

ಎಲ್ಲಿಗೈದುವೆ ನಿಲ್ಲು | ಹುಲು ಮಾನವನೆ | ಮಲ್ಲತನ ದೋರ್ವದೆ ।

ಮ್ಮಲ್ಲಿ ಬಲವಿರಲೂ ॥ ೧ ॥ ಹಂದೆ ಖಳ ದೈತ್ಯ ನಿ । ನ್ನಂದದಸುರನು ಬಿದ್ದು । ಹೊಂದಿದನು ಯಮ ಪುರವ । ಕೊಂದೀವೆ ಜೊತೆಗೆ ॥ ೨ ॥ ಲೋಹಿತಾಕ್ಷನ ಗೆದ್ದ । ಬಾಹುಬಲ ಶೌರ್ಯ ವೆಂ । ಮಿೂ ಹಿರಿಮೆ ಗೆಣೆಯಹುದೆ । ನೀ ಹೋರು ನೋಳ್ಪೆ ॥ ೩ ॥ ಪಿಶಿತ ಮಾಂಸಗಳ ಮೆ । ದ್ದಿಸೆಯುವಂತಲ್ಲ ರಣ । ದೊಸಗೆ ನೀನೇನರಿವೆ । ಯಸುರ ಕಡು ಮೂರ್ಖ ॥ ೪ ॥ ಹುಲು ನರನೆ ನಿನ್ನಂತ । ಹಲವರೆನ್ನುದರದೊಳು । ನೆಲೆಯಾದರಿನ್ನು ನೀ । ನುಳಿವ ಪಾಡುಂಟೇ ॥ ೫ ॥ ಎಂದೆನಲು ಕೋಪದೊಳ । ಗಿಂದ್ರಾಸ್ತ್ರವನು ಬಿಡಲು । ಮಂದಮತಿಯದನು ಶಚಿಯಿಂದ ಮೋಹಿಸಿದಾ ॥ ೬ ॥ ಭೂಪಾಲ ಬಳಿಕ ಫಣಿ । ರೋಪವನು ತೆಗೆದೆಸೆಯ । ಲಾ ಪಾಪಿ ಯಮ ಪುರಕೆ । ತಾ ಪಯಣ ಗೈದಾ ॥ ೭ ॥ ಕಂಡದನು ದುರ್ಜಯನು । ಖಂಡೆಯವ ಝಳಪಿಸುತ । ಖಂಡಪರಶುವ ರೋಷ । ಗೊಂಡೆಂದ ನೃಪಗೆ ॥ ೮ ॥

ರಾಗ ಮಾರವಿ ಏಕತಾಳ

ಎಲೆ ಪೋರನೆ ನೀ । ನಳದುಳಿದ್ದೈದುತ । ಗೆಲಿದೆಯ ನಮ್ಮವರ ಹುಲುನರನೊರಜುವೆ । ಹುಲಿಗೆಣೆಯೇ ಕುರಿ । ಕೊಲುವೆನು ನಿಮಿಷದಲಿ ॥ ೧ ॥ ಅಬ್ಬರಿಸದಿರೆಲೊ । ಕರ್ಬರ ಸಾಕಿ । ನ್ನಬ್ಬರಿಸಲು ಬಿಡೆನೂ । ಪೆರ್ಬುಲಿ ಯಾದರ । ದುರ್ಬುವ ಹರಿಗಿದಿ । ರಾರ್ಭಟೆಯೇ ಪೇಳೂ ॥ ೨ ॥ ಬಿಡು ಗಣ್ಣರು ಸಹ ನಡುಗುವರೆನ್ನಯ । ಕಡುಗಲಿತನಕಾಗಿ । ಮೃಡ ಬ್ರಹ್ಮಾದ್ಯರ ಬಿಡನೊಮ್ಮೆಗೆ ನೀ । ಬಡನರನೆನಗೀಡೆ ॥ ೩ ॥ ಕೆಟ್ಟದನುಜ ಮತಿ । ಗೆಟ್ಟರೆ ಪೂಜ್ಯರ । ದಟ್ಟಿಸಿ ನುಡಿಯದಿರು । ಬೆಟ್ಟಕಿರುವೆ ಸರಿ । ಗಟ್ಟುವುದೇ ಮರಿ । ದೊಟ್ಟುವೆ ನೀಕ್ಷಣದಿ ॥ ೪ ॥ ಎನೆ ಕೋಪ ದೊಳತಿ । ಮಿನುಗುವ ಖಡ್ಗವ । ದನುಜನು ಝಳಪಿಸಲು । ಜನಪತಿ ಯದರನು । ಗಣಿಸದೆ ಸೆಳೆಯುತ । ನೆನೆಯುತ ಶಂಕರನಾ ॥ ೫ ॥

ಭಾಮಿನಿ

ಧರಣಿಪಾಗ್ರಣಿ ದಿವ್ಯ ಶಕ್ತಿಯ । ದುರುಳ ಖಳನುರಕೆಸೆಯೆ

ಸಹಿಸದೆ । ತೆರಳಿದನು ಯಮುನವರಕಾಂಬಾತುರದೊಳಾ ಬಳಿಕ ॥ ಸೆರೆಯೊಳಿಪ್ಪಾ ಶಿವೆಯ ನೃಪ ಶೇ । ಖರನು ಬಿಡಿಸುತಲಧಿಕ ಬಳಲಿಹ । ವರ ಪತಿವ್ರತೆಗೆಂದ ಕರುಣಾನಂದ ಬಾಷ್ಪದಲೀ ॥ ೧ ॥

ರಾಗ ಬೇಗಡೆ ಅಷ್ಟತಾಳ

ಬಾಲೆ ಸದ್ಗುಣ । ಮಾಲೆ ಬಳಲಿದೆಯಾ । ನಿನಗೆನ್ನವರಿಸಿದ । ಮೇಲೆ ಕಷ್ಟದ । ಪಾಲೆ ಖಳ ಸೆರೆಯಾ | ಬಾಳಲರಿಯದ ಬಂಧನದಿ ನೀ | ಲಾಳಕಿಯೆ ನೀನುಳಿದು ದೊರಕಿದು । ದೇಳು ಜನ್ಮದ ಪುಣ್ಯ ವೆನಗೆನು । ರಾಳ ಗಾಮಿನಿ ಮದನ ಮೋಹಿನಿ ‖ ೧ ‖ ಪರಮ ಮಂಗಲ । ಕರನು ಪುರಹರನೂ । ಸಲಹಿರ್ಪನೆನ್ನನು । ಕರುಣ ನಿಧಿ ಶಂ । ಕರನ ಮಹಿಮೆಯನೂ | ಸುರಪ ಮುಖ್ಯರು ತಿಳಿಯ ರವನನು । ಮರೆಯದರ್ಚಿಪ । ಶರಣರಿಗೆ ಭವ | ದುರಿತ ಭಯಗಳ ದುಂಟೆ ಗಿರಿಜಾ | ವರನ ವಿಶ್ವೇಶ್ವರನ ನೆನೆವುದು ॥ ೨ ॥ ಮುಂದೆ ನಾವಾ | ನಂದದಿಂ ನಮ್ಮಾ । ವರ ರುದ್ರಪುರವನು । ಹೊಂದಿ ಬಾಳುವ । ದಂದವದು ಧರ್ಮ | ಚಂದ್ರಶೇಖರನಾಜ್ಞೆ ಕಡೆಗಾ ' ನಂದಿವಾಹನ ನೀವ ಮುಕ್ತಿಯ । ಸುಂದರಾಂಗಿಯೆ ಪೋಪುದೆನ ಲವ । ನೊಂದಿಗೆದ್ದಳು ಮಂದಹಾಸದಿ ॥ ೩ ॥

ವಾರ್ಧಿಕ

ಚಿತ್ತವಿಸಿ ಮುನಿವರರು ನೃಪನಿಂತು ಸತಿಸಹಿತ | ಪತ್ತನವ ಸಾರ್ದು ತ್ರೈಲೋಕ ಸುಂದರಿಯೊಡನೆ । ಬಿತ್ತರಿಸಲೆಲ್ಲವಂ ನಿನ್ನಂ ಪರೀಕ್ಷಿಸಿದೆ ಪಿತನಾಜ್ಞೆಯಿಂದೆನ್ನುತಾ ॥ ಸತ್ಯ ಧರ್ಮಕೆ ಮೆಚ್ಚಿ ಸಕಲ ಧಾತ್ರಿಯನವನಿ । ಗಿತ್ತುಂಗುರವ ನೀಯೆ ಹಲಕಾಲ ರಾಜ್ಯ ವಾ । ಳುತ್ತ ಪುತ್ರನ ಪಡೆದು ಕಟ್ಟೆ ಪಟ್ಟವ ಪತ್ನಿಯೊಡನೆ ಸೇರ್ದನು ಶಿವನನೂ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಈ ತೆರದಿ ಶೌನಕರಿಗೊಲಿದಾ । ಸೂತ ಪೌರಾಣಿಕನು ಪೇಳ್ದುದ | ಭೂತಳಾಮರ ವಿಷ್ಣುವರ ಶ್ರೀ । ನಾಥ ಭಜಕಾ ॥ ೧

ಕಿರಿಗಹನ ಭೋಧಕನು ನಾ ಗೈ । ದಿರುವೆ ನೆರೆಯಪ್ಪಾಡಿ ಕೇಶವ। ಗುರು ನಿರೂಪಣೆಯಿಂದ ಕಮಲಾ । ಕರನ ದಯದಿ ॥ ೨ ॥ ಕನ್ನಡದ ಸೇವೆಯಿದೆನ್ನುತ್ತಲಿ | ಕನ್ನಡಿಗರಭಿಮಾನದಿಂದಲಿ । ಮನ್ನಿಸಿದರಾನ್ ಗೈದುದಕೆ ಸಂ । ಪನ್ನನಾದೇ ॥ ೩ ॥

ಮಂಗಲ ಪದ ರಾಗ ಅಷ್ಟತಾಳ

ಮಂಗಲಂ ಜಯ । ಮಂಗಲಂ ಜಯ । ಮಂಗಲಂ ಶ್ರೀ ರಂಗಗೇ । ಮಂಗಲಂ ಜಯ । ಮಂಗಲಂ ಜಯ | ಮಂಗಲಂ ನೀಲಾಂಗಗೇ ॥ ಪ. ಅ. ॥ ಕರುಣಸಾಗರ | ಶರಣರಾಗರ । ದುರಿತ ಭಯ ಸಂ । ಹರಣಗೇ ತರಿದು ದುರುಳರ । ಪರಮ ಭಕ್ತರ | ಪೊರೆವ ಪಾವನ । ಚರಣಗೇ ||೧|| ಕಮಲನೇತ್ರಗೆ । ವಿಮಲ ಗಾತ್ರಗೆ । ದ್ಯುಮಣೀತೇಜಪವಿತ್ರಗೆ । ಸುಮನಪಾತ್ರಗೆ । ಶಮನ ಸೂತ್ರಗೆ । ನಮಿಪೆ ಶಂಕರ ಮಿತ್ರಗೇ ॥ ೨ ॥ ಶೇಷಶಯನ ವಿ । ಳಾಸ ಮಂಜುಳ । ಹಾಸ ತ್ರೈಜಗದೀಶಗೇ । ದೋಷಹರ ವಿ । ಶ್ವೇಶಸುರವರ । ಪೋಶ ಮುನಿ ಪುರ ವಾಸಗೇ ॥ ಮಂಗಲಂ ಜಯ ಮಂಗಲಂ ॥ ೩ ॥

ಅಂತು ಸಂಧಿ ಒಂದಕ್ಕಂ ಪದ ೨೭೧ಕ್ಕಂ ಮಂಗಳ ಮಸ್ತು

ಶ್ರೀ ಶ್ರೀ ಶ್ರೀ